ಐಕ್ಯರಂಗ

ಮೇ ದಿನ ೧೯೮೯

ಮೇ ದಿನ ಪುರವಣಿ ೩೦.೪.೧೯೮೯

ದ್ವಿತೀಯ ಅಂತರ್‌ರಾಷ್ಟ್ರೀಯದ ಮೇ ದಿನ ಕರೆಗೆ 100 ವರ್ಷಗಳು



ಬೇರೆ ಬೇರೆ ದೇಶಗಳ ಕಾರ್ಮಿಕರು ದೇಶಗಳ ನಡುವಿನ ಕೃತಕ ಅಡ್ಡಗೋಡೆಗಳನ್ನು ಕೆಡವುತ್ತಿದ್ದಾರೆ. 1906ರ ಮೇದಿನದಂದು ಇಟಲಿಯಲ್ಲಿ ಒಂದು ಪೋಸ್ಟರ್.

ಜುಲೈ 14,1889. ಫ್ರಾನ್ಸ್‌ನ ಬೂರ್ಜ್ವಾವರ್ಗ ಫ್ರೆಂಚ್ ಕ್ರಾಂತಿಯ ಶತಮಾನೋತ್ಸವ ಆಚರಿಸಲು ವಿಶ್ವದ ಬಂಡವಾಳಶಾಹಿಗಳನ್ನುಮತ್ತುಬಂಡವಾಳಶಾಹಿ ವಿಧಾನಗಳನ್ನು ಅಪ್ಪಿಕೊಳ್ಳಲಾರಂಭಿಸಿದ ಯೂರೋಪಿನ ಪಾಳೆಯಗಾರರನ್ನು ಪ್ಯಾರಿಸ್ಸಿಗೆ ಆಹ್ವಾನಿಸಿತ್ತು. ಅದೇ ದಿನ ಅದೇ ಪ್ಯಾರಿಸ್ಸಿನ ಪೆಟ್ರೆಲ್ ಸಭಾಂಗಣದಲ್ಲಿ ಇನ್ನೊಂದು ಚಾರಿತ್ರಿಕ ಅಂತರ ರಾಷ್ಟ್ರೀಯ ಸಭೆ ಆರಂಭವಾಯಿತು. ಆದಿನ ವಿಶ್ವದ ಕಾರ್ಮಿಕ ವರ್ಗದ ಪ್ರಸಿದ್ಧ ಮುಖಂಡರುಗಳು ಭಾಗವಹಿಸಿದ್ದ ನಂತರ ದ್ವಿತೀಯ ಅಂತರಾಷ್ಟ್ರೀಯದ ಸ್ಥಾಪನೆಗೆ ದಾರಿ ಮಾಡಿಕೊಟ್ಟ ಪ್ರಥಮ ಅಂತರಾಷ್ಟ್ರೀಯ ದುಡಿಯುವ ಜನರ ಮಹಾಧಿವೇಶನ ಅದು. ಮೇದಿನವನ್ನು ಕಾರ್ಮಿಕ ವರ್ಗದ ಅಂತರ್‌ರಾಷ್ಟ್ರೀಯ ದಿನವನ್ನಾಗಿ ಮಾಡಿದ ಚಾರಿತ್ರಿಕ ಮಹಾಧಿವೇಶನವದು.

ಮಹಾಧಿವೇಶನದ ಸಂಘಟಕರು ಜುಲೈ 14ನ್ನು ಉದ್ದೇಶಪೂರ್ವಕವಾಗಿಯೇ ಆರಿಸಿಕೊಂಡಿದ್ದರು. 1789ರಲ್ಲಿ ಆದಿನ ಪ್ಯಾರಿಸಿನ ಉದಯೋನ್ಮುಖಿ ಬಂಡವಾಳಶಾಹಿಯ ನೇತೃತ್ವದಲ್ಲಿ ಜನ ಫ್ರೆಂಚ್‌ಪಾಳೆಯಗಾರಿಕೆಯ ಸಂಕೇತವಾಗಿದ್ದ ಬೆಸ್ಟೈಲ್ ಕಾರಾಗೃಹವನ್ನು

ಈಮಹಾಧಿವೇಶನ ನಡೆಸಲು ನಿರ್ಧರಿಸಿದ್ದ ಫೆಬ್ರುವರಿ 1889ರ ಹೇಗ್ ಸಮ್ಮೇಳನ ಮಾಡಿಕೊಂಡ ಮನವಿಯ ಒಕ್ಕಣಿಕೆಯ ಒಂದು ಭಾಗ ಹೀಗಿತ್ತು.

ನಾಶಮಾಡಿದ್ದರು. ನಂತರದ ಒಂದು ಶತಮಾನದಲ್ಲಿ ಅದೇ ಬಂಡವಾಳಶಾಹಿ ಹಲವಾರು ದೇಶಗಳನ್ನೇ ದುಡಿಯುವ ಜನತೆಗೆ ಕಾರಾಗೃಹವನ್ನಾಗಿ ಪರಿವರ್ತಿಸಿದ್ದಾರೆ. ಈ ಕಾರಾಗೃಹಗಳನ್ನುನಾಶಮಾಡುವುದೀಗಕಾರ್ಮಿಕ ವರ್ಗದ ಕೆಲಸ ಎಂಬ ಸಂಗತಿಯತ್ತ ಗಮನ ಸೆಳೆಯುವುದು ವಿಶ್ವದ ಸಮಾಜವಾದಿಗಳ ಉದ್ದೇಶವಾಗಿತ್ತು.

"ಬಂಡವಾಳಶಾಹಿ ವರ್ಗ ದುಡಿಯುವ ಜನರ ಶ್ರಮವನ್ನು ಮೆಚ್ಚಿಕೊಳ್ಳಲೆಂದು ಶ್ರೀಮಂತರನ್ನು ಅಧಿಕಾರವಂತರನ್ನು ಅಂತರಾಷ್ಟ್ರೀಯ ಪ್ರದರ್ಶನಕ್ಕೆ ಆಹ್ವಾನಿಸಿದೆ. ಅತ್ತ ಮಾನವ ಕುಲದ ಅತ್ಯಂತ ದೊಡ್ಡ ಸಂಪತ್ತಿನ ಕೇಂದ್ರದಲ್ಲಿರುವ ದುಡಿಯುವ ಜನರ ಶ್ರಮವನ್ನು ನರಕಕ್ಕೆ ತಳ್ಳಲಾಗಿದೆ. ನಾವು ಸಮಾಜವಾದಿಗಳು, ಶ್ರಮಶಕ್ತಿಯ ಉದ್ಧಾರ ಬಯಸುವವರು, ಸದ್ಯದ ಕೂಲಿವ್ಯವಸ್ಥೆಯ ನಾಶದ ಗುರಿಹೊಂದಿದವರು, ದುಡಿಯುವ ಜನ ತಾವುಒಟ್ಟಾಗಿ ಸೃಷ್ಟಿಸಿದ ಸಂಪತ್ತಿನ ಮೇಲೆ ಅಧಿಕಾರ ಪಡೆಯಲು ಸಾಧ್ಯವಿರುವ ಒಂದು ಸಮಾಜವ್ಯವಸ್ಥೆ ಸ್ಥಾಪಿಸುವ ಗುರಿ ಇಟ್ಟುಕೊಂಡವರು ಜುಲೈ 14ರಂದು ಪ್ಯಾರಿಸಿನಲ್ಲಿ ಸಭೆಸೇರಲೆಂದು ನಿಜವಾದ ಉತ್ಪಾದಕರನ್ನು ಆಹ್ವಾನಿಸುತ್ತೇವೆ.

ಇಪ್ಪತ್ತು ದೇಶಗಳ 467 ಪ್ರತಿನಿಧಿಗಳು ಭಾಗವಹಿಸಿದ್ದ ಈ ಮಹಾಧಿವೇಶನ ವಿಶ್ವದೆಲ್ಲೆಡೆ ಏಕಕಾಲದಲ್ಲಿ ಕಾರ್ಮಿಕರು ಪರಸ್ಪರ ಸೌಹಾರ್ದ ವ್ಯಕ್ತಪಡಿಸುವ ದಿನವಾಗಿ ಮೇದಿನಾಚರಣೆಗೆ ನಾಂದಿ ಹಾಕಿದ ಒಂದು ಚಾರಿತ್ರಿಕ ನಿರ್ಣಯವನ್ನು ಅಂ ಗೀಕರಿಸಿತು.

"ನಿರ್ಧಾರಿತ ದಿನದಂದು ಎಲ್ಲ ದೇಶಗಳಲ್ಲಿ , ಎಲ್ಲ ನಗರಗಳಲ್ಲಿ ಒಂದು ಬೃಹತ್ ಮತಪ್ರದರ್ಶನ ಜರುಗಲಿದೆ. ಆದರಲ್ಲಿ ದುಡಿಯುವ ದಿನವನ್ನು 8 ಗಂಟೆಗಳಿಗೆ ಶಾಸನಾತ್ಮಕವಾಗಿ ಇಳಿಸಬೇಕೆಂದು ಮತ್ತು ಫ್ರೆಂಚ್ ಅಂತರಾಷ್ಟ್ರೀಯ ಮಹಾಧಿವೇಶನದ ಇತರ ನಿರ್ಣಯಗಳನ್ನುಅನುಷ್ಠಾನಕ್ಕೆ ತರಬೇಕೆಂದು ಅಧಿಕಾರಿಗಳನ್ನು ದುಡಿಯುವ ಜನರು ಎಲ್ಲ ಕಡೆ ಒಂದೇ ವೇಳೆಯಲ್ಲಿ ಒತ್ತಾಯಿಸಲಿದ್ದಾರೆ.


ಅಮೇರಿಕನ್ ಫೆಡರೇಶನ್ ಅಫ್ ಲೇಬರ್ ಸೈಂಟ್ ಲೂಯಿಯಲ್ಲಿ ಅಕ್ಟೋಬರ್ 1888ರಲ್ಲಿನಡೆದ ತನ್ನ ಮಹಾಧಿವೇಶನದಲ್ಲಿ ಮೇ1 ,1890 ರಂದು ಇಂತಹದೇ ಮತ ಪ್ರದರ್ಶನ ನಡೆಸಬೇಕೆಂಬ ನಿರ್ಣಯವನ್ನು ಈಗಾಗಲೇಅಂಗೀಕರಿಸಿರುವುದನ್ನು ಪರಿಗಣಿಸಿ ಈ ದಿನಕ್ಕೆ ಈ ಮೂಲಕ ಅಂಗೀಕಾರ ನೀಡಲಾಗಿದೆ.ವಿವಿಧ ದೇಶಗಳ ದುಡಿಯುವ ಜನ ತಮ್ಮದೇಶದ ವಿಶಿಷ್ಟ ಪರಿಸ್ಥಿತಿಗಳಿಗನುಗುಣವಾಗಿ ಮತಪ್ರದರ್ಶನ ನಡೆಸ ಬೇಕು."

ಪ್ಯಾರಿಸ್ ಮಹಾಧಿವೇಶನ ಈ ದಿನಾಚರಣೆಯನ್ನು ಪ್ರತಿ ವರ್ಷ ನೆಡೆಸುವ ಯೋಜನೆ ಹಾಕಿರಲಿಲ್ಲ . ಆದರೆ ಕಾರ್ಮಿಕ ಪಕ್ಷಗಳ ಮಹಾಧಿವೇಶನಗಳು ಒಂದಾದ ಮೇಲೊಂದು 1891 ರಲ್ಲಿ ಮೇದಿನ ಪ್ರದರ್ಶನ ನಡೆಸಲು ಕರೆ ನೀಡಿದವು.

1891ರ ಆಗಸ್ಟಿನಲ್ಲಿ ಬ್ರೆಸೆಲ್ಸ್‌ನಲ್ಲಿ ನಡೆದ ಎರಡನೇ ಅಂತರ್‌ರಾಷ್ಟ್ರೀಯದ ಎರಡನೇ ಮಹಾಧಿವೇಶನ ಈ ಎರಡು ಮೇದಿನಾಚರಣೆಗಳ ಅನುಭವಗಳನ್ನು ಸಂಗ್ರಹಿಸಿತು. ಇವು ಸಮಸ್ತ ಅಂತರ್‌ರಾಷ್ಟ್ರೀಯ ಕಾರ್ಮಿಕ ಆಂದೋಲನಕ್ಕೆ ಬಹಳ ಪ್ರಯೋಜನಕಾರಿಯಾಯಿತು ಎಂಬುದು ಎಲ್ಲ ಪ್ರತಿನಿಧಿಗಳ ಒಮ್ಮತಾಭಿಪ್ರಾಯವಾಗಿತ್ತು. ಆದ್ದರಿಂದ ಮೇ 1 ರಂದು ಪ್ರತಿವರ್ಷ ಜಾಗತಿಕ ಮತ ಪ್ರದರ್ಶನ ನಡೆಸುವ ಪರಂಪರೆ ಸ್ಥಾಪಿಸಲು ಮಹಾಧಿವೇಶನ ನಿರ್ಧರಿಸಿತು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಆ ದಿನ ಕೆಲಸ ನಿಲ್ಲಿಸಬೇಕೆಂದೂ ಮಹಾಧಿವೇಶನ ಸೂಚಿಸಿತು.



ಇತಿಹಾಸದ ಘೋಷಿತ ತೀರ್ಪನ್ನು ದೇಶಾದ್ಯಂತ ಪುನರುಚ್ಚರಿಸಬೇಕು



-ಬಿ.ಟಿ.ರಣದಿವೆ

ಮೇ ದಿನ 1988ರ ನಂತರದ ಒಂದು ವರ್ಷವನ್ನು ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗ ಸಮಾಜವಾದ ಮತ್ತು ಅದು ಪ್ರತಿನಿಧಿಸುವ ಎಲ್ಲದರ ವಿರುದ್ಧ ಅಪಪ್ರಚಾರದ ಒಂದು ಮೇಳಗಾನವನ್ನೇ ಕಂಡ ವರ್ಷ ಎಂದು ನೆನಪಿಸಿಕೊಳ್ಳುತ್ತದೆ. ಬಂಡವಾಳಶಾಹೀ ವ್ಯವಸ್ಥೆಯ ರಕ್ಷಕರು, ಅದನ್ನು ಹೇಗಾದರೂ ಸಮರ್ಥಿಸಿಕೊಳ್ಳಲು ತವಕ ಪಡುವವರು ನಡೆಸಿದ ಹಲ್ಲೆಗಳಿವು.

ಅಂದರೆ ಬಂಡವಾಳಶಾಹಿ ಒಂದು ಸಮರ್ಥ ಸಾಮಾಜಿಕ ವ್ಯವಸ್ಥೆಯೆಂದು ತೋರಿಸಿಕೊಡುವಲ್ಲಿ ಒಂದು ಮಹಾನ್ ಯಶಸ್ಸು ಗಳಿಸಿದೆಯೆಂದೇನಲ್ಲ. ಅಥವಾ ಈಗಾಗಲೇ ವಿಶ್ವದ ಮೂರನೆ ಒಂದು ಭಾಗವನ್ನು ಆವರಿಸಿದ ಸಮಾಜವಾದೀ ವ್ಯವಸ್ಥೆಯ ಮೇಲೆ ಬಂಡವಾಳಶಾಹೀ ತನ್ನ ಹಿರಿಮೆ ಸ್ಥಾಪಿಸಿದೆಯೆಂದೂ ಅಲ್ಲ. ಬದಲಾಗಿ ಉತ್ಪಾದನೆಯಲ್ಲಿ ದೊಡ್ಡ ಮುನ್ನಡೆ ಸಾಧಿಸಿದರೂ, ಕೈಗಾರಿಕಾ ತಂತ್ರಜ್ಞಾನದ ಕ್ರಾಂತಿಯಿಂದ ಎಲ್ಲಾ ಮಾನವ ಅಗತ್ಯಗಳನ್ನು ಪೂರೈಸುವ ಸಾಧ್ಯತೆ ಮೂಡಿಬಂದಿದ್ದರೂ ಕೂಡಾ ಬಂಡವಾಳ ಶಾಹೀ ಸಮಾಜದ ಹಳೆಯ ಕೆಡುಕುಗಳು ಹಾಗೆಯೇ ಮುಂದುವರಿಯುತ್ತಿವೆ. ಒಂದೊಮ್ಮೆ ಕೈಗಾರಿಕಾ ತಂತ್ರಜ್ಞಾನ ಕ್ರಾಂತಿ, ಸೇವಾ ವಲಯಗಳಲ್ಲಿ ಕಾರ್ಮಿಕರ ಅಗಾಧ ಹೆಚ್ಚಳ, ಅತ್ಯಾಧುನಿಕ ಉದ್ದಿಮೆಗಳಲ್ಲಿ ಮಾರ್ಕ್ಸ್‌ರವರ ಕಾಲದ ಕಾರ್ಮಿಕ ವರ್ಗದಂತಿರದ ಹೊಸ ಶ್ರಮಜೀವಿ ಇವೆಲ್ಲಾ ಬಂಡವಾಳಶಾಹಿಯ ಹೊಸ ಪುನರುತ್ಕರ್ಷದ ಸಮಾಜವಾದೀ ಪರಿಕಲ್ಪನೆಯಲ್ಲಿನ ದೋಷದ ಲಕ್ಷಣಗಳೆಂದು ಹೇಳಲಾಗುತ್ತಿತ್ತು. ಅಲ್ಲದೆ ಬಂಡವಾಳಶಾಹೀ ದೇಶಗಳ ಆರ್ಥಿಕತೆಯಲ್ಲಿ ಪ್ರಭುತ್ವದ ಹೆಚ್ಚೆಚ್ಚು ಮಧ್ಯಪ್ರವೇಶ ಸಮಾಜವಾದವನ್ನು ಬಂಡವಾಳಶಾಹಿಯ ಹೆಚ್ಚೆಚ್ಚು ಸಮೀಪ ತಂದಿತು, ಆದರಲ್ಲೂ ಬಂಡವಾಳ ಶಾಹಿಗೆ ವೈಯುಕ್ತಿಕ ಉತ್ತೇಜನೆಯ, ಉತ್ಪಾದನೆಯಲ್ಲಿ ಲಾಭದ ಪ್ರೇರಣೆಯ ಅನುಕೂಲವಿತ್ತು. ಎಂದೆಲ್ಲಾ ತರ್ಕ ಹೂಡಲಾಗುತ್ತಿತ್ತು. ಇವು ಯಾವವೂ ಬಹಳ ದಿನ ನಿಲ್ಲಲಿಲ್ಲ. ಆದರ ಇತ್ತೀಚಿನ 'ಸಾಧನೆ'ಗಳು ಕೂಡಾ ತಾತ್ಕಾಲಿಕ ಮೇಲೇರಿಕೆಯಿರಲಿ, ಇಳಿತವಿರಲಿ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಆರ್ಥಿಕತೆ ಒಂದೇ ತೆರದಲ್ಲಿರುತ್ತದೆ ಎಂದು ತೋರಿಸಿಕೊಟ್ಟಿವೆ. ತಂತ್ರಜ್ಞಾನ ಕ್ರಾಂತಿಯಿದ್ದಾಗ್ಯೂ ಅದರ ಸಮಸ್ಯೆಗಳು ಉಲ್ಬಣಗೊಳ್ಳುತ್ತಲೇ ಇರುತ್ತವೆ. ಅದೊಂದು ಕೊಳ್ಳಿ ಹೊಡೆಯುವ ವ್ಯವಸ್ಥೆ. ಅದು ಮುಂದೆ ಚಲಿಸಲಿ ಅಥವಾ ಹಿಂದೆ ಚಲಿಸಲಿ ದೇಶದ ಮತ್ತು ವಿದೇಶದ ಶೋಷಿತ ವರ್ಗವನ್ನು ಅದು ಬಲಿತೆಗೆದುಕೊಳ್ಳುತ್ತದೆ. ಅದು ಇತ್ತೀಚೆಗೆ ಆರ್ಥಿಕ ಉತ್ಕರ್ಷ ಕಂಡಾಗಲೂ ಅದರ ಜತೆಗೇ ನಿರುದ್ಯೋಗವೂ ಹೆಚ್ಚಿತು. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಹೆಚ್ಚಿನ ನಿರುದ್ಯೋಗ ದರ ಕಂಡಿತು. ಏಳು ಪ್ರಮುಖ ಬಂಡವಾಳಶಾಹಿ ದೇಶಗಳಲ್ಲಿ ನಿರುದ್ಯೋಗದರ 1984ರಲ್ಲಿ 7.6%, 1985 ರಲ್ಲಿ 7.4% 1986ರಲ್ಲಿ 7.5 %. 1980ರಲ್ಲಿ ಅದು 5 .6%ವಿತ್ತು, 1981ರಲ್ಲಿ 6.5 %ವಿತ್ತು.

ಅಲ್ಲದೆ ಈ ತಾತ್ಕಾಲಿಕ ಆರ್ಥಿಕ ಉತ್ಕರ್ಷ ಕೂಡಾ ಅದು ಸಾಧಿಸಿರುವುದು ಮೂರನೇ ಜಗತ್ತಿನ ದೇಶಗಳ ತಲೆ ಮೆಟ್ಟಿ ಅಂದರೆ ಹೊರೆಯನ್ನು ಆದೇಶಗಳ ಜನರ ಹೆಗಲಿಗೆ ವರ್ಗಾಯಿಸಿ. ಪ್ರತಿಕೂಲ ವ್ಯಾಪಾರ ಷರತ್ತುಗಳ ಮೂಲಕ ಅವರ ಸಾಲ ಹೊರೆ ಹೆಚ್ಚಿಸಿ. ಆ ಮೂಲಕ ಅವುಗಳ ರಫ್ತು ಮಾಡುವ ಪ್ರಾಥಮಿಕ ಸಾಮಗ್ರಿಗಳ ಬೆಲೆ ಕುಸಿಯುವಂತೆ ಮಾಡಿ.

ಹೀಗಿದ್ದರೂ ಬಂಡವಾಳಶಾಹಿ ವ್ಯವಸ್ಥೆಯ ಸಮರ್ಥನೆಗೆ ತವಕ ಪಡುವವರು, ಸಮಾಜವಾದದ ದೂಷಕರು ಇದ್ದಕ್ಕಿದ್ದಂತೆ ಎಲ್ಲಾ ದೇಶಗಳಲ್ಲಿ ಸಮಾಜವಾದ ವಿಫಲಗೊಂಡಿದೆ ಎಂದು ಘೋಷಿಸುವಷ್ಟು ಆತ್ಮವಿಶ್ವಾಸ ಹೇಗೆ ಪಡೆದರು? ಅವರೀಗ ಹಲವು ಸಮಾಜವಾದಿ ದೇಶಗಳ ಇತ್ತೀಚಿನ ಬೆಳವಣಿಗೆಗಳ ದುರ್ಲಾಭ ಪಡೆಯುತ್ತಿದ್ದಾರೆ.

ದಶಕಗಳಿಂದ ಕಂಡಿರುವ ಆಂದ್ರೈ ಗ್ರೊಮಿಕೋ ಮಾಜೀ ಅಧ್ಯಕ್ಷ ಲಿಯೊನಿಡ್ ಬ್ರೆಷ್ನೆವ್‌ಗೆ ಕುಡಿತದ ಗಂಭೀರ ಸಮಸ್ಯೆಯಿತ್ತು ಎಂದು ತಿಳಿಸಿದ್ದಾರೆ. 1979ರಲ್ಲಿ ಕಾಬೂಲಿನಲ್ಲಿ ಕಮ್ಯೂನಿಸ್ಟ್ ಮುಖಂಡರೊಬ್ಬರ ಕೊಲೆಗೆ ಭಾವುಕ ಪ್ರತಿ ಕ್ರಿಯೆಯ ನಂತರ ಅವರು ಅಫ್‌ಘಾನಿಸ್ತಾನದ ಅತಿಕ್ರಮಣದ ಆಜ್ಞೆಯಿತ್ತರು..... ಸ್ಟಾಲಿನ್‌ರಲ್ಲಿ ಗ್ರೊಮಿಕೋ ಒಂದು ಅದ್ಭುತ ಗುಣವನ್ನು, ಸಂಗತಿಗಳನ್ನು ಗುಪ್ತವಾಗಿಡುವ ಸಾಮರ್ಥ್ಯವನ್ನು ಕಂಡಿದ್ದರು. ಸಂಗತಿಗಳನ್ನು ಮರೆಮಾಚುವ ಒಂದು ಸಂಪೂರ್ಣ ವ್ಯವಸ್ಥೆಯೇ ಅವರಲ್ಲಿತ್ತು. ನಾನು ಹಲವು ಬಾರಿ ಸ್ಟಾಲಿನ್‌ರನ್ನು ಭೇಟಿಯಾಗಿದ್ದರೂ ಏನು ನಡೆಯುತ್ತಿದೆ ಎಂದು ನನಗೆ ನಿಜವಾಗಿಯೂ ತಿಳಿಯುತ್ತಿರಲಿಲ್ಲ. ಸ್ಟಾಲಿನ್ ಅವಧಿ ಮಿಲಿಯಗಟ್ಟಲೆ ಜೀವಗಳನ್ನು ಬಲಿ ತೆಗೆದುಕೊಂಡ ಕ್ರೂರ ದಮನದ ಅವಧಿ".

> ಮನುಷ್ಯನಿಂದ ಮನುಷ್ಯನ ಶೋಷಣೆಯ ನಿರ್ಮೂಲನದ ಅಡಿಗಲ್ಲಿನ ಮೇಲೆ ನಿಂತ ಸಮಾಜವಾದೀ ಸಮಾಜದ ಹಿರಿಮೆ ಕಂಡು ಬರುತ್ತದೆ. ಆದರ ವಿದೇಶಾಂಗ ಧೋರಣೆ ಬೇರೆ ದೇಶಗಳ ಮೇಲೆ ಆಕ್ರಮಣದ ಮೇಲೆ ನಿಲ್ಲಲು ಸಾಧ್ಯವಿಲ್ಲ. ಬದಲಾಗಿ ಎಲ್ಲಾ ದೇಶಗಳ ಸ್ವಾತಂತ್ರ ಮತ್ತು ಸ್ವಾಧೀನತೆಗೆ ಬೆಂಬಲವೇ ಆದರ ಮೂಲವಾಗಿರಬೇಕಾಗಿರುತ್ತದೆ.

ಆದೇಶಗಳ ಆರ್ಥಿಕ ತೊಂದರೆಗಳು, ಅವನ್ನ ಸರಿಪಡಿಸುವ ಕ್ರಮಗಳು, ಹೊಸ ಪ್ರಜಾಸತ್ತಾತ್ಮಕ ಸುಧಾರಣೆಗಳು, ಜನಾಂಗ ತಿಕ್ಕಾಟ, ಈಗ ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳಲು ಸಾಧ್ಯವಾಗಿರುವ ಕೆಲವು ಸೋವಿಯತ್ ನಾಗರಿಕರ ಸಮಾಜವಾದ-ವಿರೋಧಿ, ಸೋವಿಯತ್-ವಿರೋಧಿ ಮಾತುಗಳ ದುರ್ಲಾಭ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಕೆಲವು ಸೋವಿಯತ್ ರಾಜ್ಯಗಳಲ್ಲಿ ವ್ಯಕ್ತಿಗಳು, ಗುಂಪುಗಳು, ಮುಖಂಡರು ಪ್ರತ್ಯೇಕಗೊಳ್ಳಬೇಕೆಂದು ಬೇಡಿಕೆಯಿಟ್ಟಿರುವುದು, ಅಂತಿಮವಾಗಿ ಸೋವಿಯತ್ ಒಕ್ಕೂಟದಲ್ಲಿ ಪ್ರಕಟವಾದ, ಭಾರತದಲ್ಲಿ ಪ್ರಚಲಿತಗೊಂಡ ಲೇಖನಗಳಲ್ಲಿ ಸ್ಟಾಲಿನ್‌ರ ಏಕಪಕ್ಷೀಯ ಖಂಡನೆ ಇವೆಲ್ಲವನ್ನು ಸಮಾಜವಾದೀ ವ್ಯವಸ್ಥೆಯನ್ನು ಹೀಯಾಳಿಸಲು ಬಳಸಲಾಗುತ್ತಿದೆ.

ತಕ್ಕ ಉತ್ತರ ನೀಡಬೇಕು

ಭಾರತದ ಪತ್ರಿಕಾ ಓದುಗರಿಗೆ ದಿನನಿತ್ಯ ಸಿಗುವ ಸುದ್ದಿಗಳು ಹೇಗಿರುತ್ತವೆಯೆಂಬುದಕ್ಕೆ ಒಂದು ಉದಾಹರಣೆ ನೋಡಿ-

"ಕ್ರೆಮ್ಲಿನ್ ಅಂತರಂಗವನ್ನು ನಾಲ್ಕು

ಸಮಾಜವಾದ ಕಟ್ಟಿದ ಮಾತಿಲ್ಲ, ಟ್ರಾಟ್ಸ್‌ಕೀವಾದದ ವಿರುದ್ಧ ಹೋರಾಟದ ಮಾತಿಲ್ಲ, ನಾಝೀ ಆಕ್ರಮಣದ ವೇಳೆಗೆ ದೇಶಕ್ಕೆ ಮಾರ್ಗದರ್ಶನ ನೀಡಿದ ಪ್ರಸ್ತಾಪವಿಲ್ಲ. ಕೇವಲ ಮುಗ್ಧ ಜನರ ಕೊಲೆಗಳ ಮಾತು-ಸ್ಟಾಲಿನ್ ಸಾರಸಂಗ್ರಹ ಇಷ್ಟೆ. ಅಫ್‌ಘಾನಿಸ್ತಾನದ ಪ್ರಶ್ನೆ ತಗೊಂಡರೆ, ಒಟ್ಟು ಈ ಅಂತರ್ರಾಷ್ಟ್ರೀಯ ಸಮಸ್ಯೆಯೇ ಸೋವಿಯತ್ ಅಧ್ಯಕ್ಷರ ಕುಡಿತದ ಚಟದಿಂದ ಸೃಷ್ಟಿಯಾಯಿತು! ಸಮಾಜವಾದವನ್ನು ಹೀಗಳೆಯಲು ಬೂರ್ಜ್ವಾ ಹದ್ದುಗಳಿಗೆ ಇನ್ನೇನುಬೇಕು? ಸಮಾಜವಾದದ ಸಾಧನೆಗಳ ಬಗ್ಗೆ ಇಂತಹ ದೂಷಣೆಯಷ್ಟೇ ಅಲ್ಲ, ಸೋವಿಯತ್ ಒಕ್ಕೂಟ ಮತ್ತು ಬೇರೆ ಸಮಾಜವಾದೀ ದೇಶಗಳ ಇತರ ಘಟನೆಗಳೂ ಜನರನ್ನು ಗಲಿಬಿಲಿಗೊಳಿಸಿವೆ, ದಿಕ್ಕೆಡಿಸಿವೆ. ಇವುಗಳಲ್ಲಿ ಕೆಲವು ಬೆಳವಣಿಗೆಗಳು ಸಮಾಜವಾದೀ ಸಮಾಜದ ಬೆಳವಣಿಗೆ ಸಾಮಾನ್ಯ ಪ್ರಕ್ರಿಯೆಯ ಭಾಗವಷ್ಟೇ. ಆರ್ಥಿಕ ನಿರ್ವಹಣೆಯಲ್ಲಿ ತಪ್ಪುಗಳು ಸಮಾಜವಾದೀ ಸಮಾಜದಲ್ಲೂ ಸಾಧ್ಯ. ಅವನ್ನು ಸರಿಪಡಿಸಬೇಕು, ನಿವಾರಿಸಬೇಕು. ಇಷ್ಟೊಂದು ವರ್ಷಗಳ ಸಮಾಜವಾದೀ ಸಮಾಜದ ನಂತರ ಆರ್ಥಿಕತೆಯಲ್ಲಿ ಸ್ಥಗಿತತೆ ಏಕೆ ಎಂದು ಬಹಳ ಮಂದಿಗೆ ಆಶ್ಚರ್ಯವಾಗಬಹುದು. ವಾಸ್ತವಿಕತೆಯೆಂದರೆ ಸ್ಥಗಿತತೆ ಇದೆ. ತಾತ್ಕಾಲಿಕ ತೊಂದರೆಗಳಿವೆ, ಅವನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕೆಲವರಿಗೆ ಏನಿದು ಎಂದನಿಸಬಹುದು: ಹಲವು ಸಮಾಜವಾದೀ ದೇಶಗಳಲ್ಲಿ ಪ್ರಸ್ತಾಪವಾಗಿರುವ ಕೆಲವು ಕ್ರಮಗಳನ್ನು ಬಹಳ ಮಂದಿ ಒಪ್ಪಲಿಕ್ಕಿಲ್ಲ. ಉತ್ಪಾದನಾ ಸಾಧನೆಗಳು ಇಡೀ ಜನತೆಗೆ ಸೇರಿದ ಸಮಾಜವಾದೀ ದೇಶಗಳ ಈ ತೊಂದರೆಗಳನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳಬೇಕು. ಅವುಗಳ ದುರ್ಲಾಭ ಪಡೆದು ಸಮಾಜವಾದದ ಕಾರ್ಮಿಕ ವರ್ಗದ ಸರ್ವಾಧಿಕಾರದ ಪ್ರಭುತ್ವದ ಹೆಸರು ಕೆಡಿಸುವ ಪ್ರಯತ್ನಗಳಿಗೆಲ್ಲಾ ತಕ್ಕ ಪ್ರತ್ಯುತ್ತರ ನೀಡಬೇಕು.

> ನಿರುದ್ಯೋಗ, ಬಡತನ, ಆಕ್ರಮಣ; ವಿಶ್ವ ಪ್ರಾಬಲ್ಯ ಸಾಮ್ರಾಜ್ಯಶಾಹಿ ಬಂಡವಾಳಶಾಹಿಯಲ್ಲಿಯೇ ಅಡಕವಾಗಿದೆಯಷ್ಟೇ ಅಲ್ಲ, ಯುದ್ಧ ಮತ್ತು ಮಿಲಿಟರಿಶಾಹಿ ಕೂಡಾ ಆದರ ಅವಿಭಾಜ್ಯ ಅಂಗ ಎಂದು ಆ ವ್ಯವಸ್ಥೆ ತೋರಿಸಿಕೊಟ್ಟಿದೆ. ಇಂತಹದೊಂದು ಬರ್ಬರ ಅಸ್ತಿತ್ವದಲ್ಲಿರಲು ಬಿಡಲಾಗದು.

ಸಿ.ಪಿ.ಐ.(ಎಂ) ನಿಲುವು

ಈ ಎಲ್ಲಾ ಬೆಳವಣಿಗೆಗಳ ಬಗ್ಗೆ ಸಿ.ಪಿ.ಐ.(ಎಂ) ಸರಿಯಾದ ನಿಲುವು ತಳೆದಿದೆ. ಪ್ರಜಾಪ್ರಭುತ್ವ ಸುಧಾರಣೆಗಳನ್ನು ಚರ್ಚಿಸುವ ಕೇಂದ್ರ ಸಮಿತಿಯ ಆಗಸ್ಟ್ 1988ರ ನಿರ್ಣಯ ಹೀಗಂದಿದೆ" "ಪ್ರತಿಯೊಬ್ಬ ಅಡಿಗೆಯಾತ ಕೂಡಾ ದೇಶ ಆಳುವುದನ್ನು ಕಲಿಯಬೇಕು ಎಂಬ ಲೆನಿನ್ ಉಕ್ತಿ ಹೆಚ್ಚೆಚ್ಚು ವಾಸ್ತವಗೊಳ್ಳುತ್ತಾ ಹೋಗಬೇಕು. ಜನಸಮೂಹಗಳ ಪ್ರಜ್ಞಾಪೂರ್ವಕ ಭಾಗವಹಿಸುವಿಕೆಗೆ ನೆರವಾಗುವ ಕ್ರಮಗಳು ಸ್ವಾಗತಾರ್ಹ. ಅವನ್ನು ಬೆಂಬಲಿಸಬೇಕು. ಅನಗತ್ಯ ಮಿತಿಗಳಿಂದ ನಾಗರಿಕರನ್ನು ಮುಕ್ತಗೊಳಿಸುವ ಸಮಾಜವಾದದ ಪರಿಮಿತಿಯೊಳಗೆ ಆರೋಗ್ಯಕರ ಚರ್ಚೆಗೆ ಅವಕಾಶ ಕೊಡುವ ಕ್ರಮಗಳು ಸಮಾಜವನ್ನು ಬಲಗೊಳಿಸುತ್ತವೆ.....ಪಕ್ಷದ ಕಾರ್ಯನಿರ್ವಹಣೆಯನ್ನು ಟೀಕಿಸುವಾಗ ಪಕ್ಷದ ಮಾರ್ಗದರ್ಶನವಿಲ್ಲದಿದ್ದರೆ ಸೋವಿಯತ್ ಪ್ರಭುತ್ವ ಅಸ್ತಿತ್ವದಲ್ಲಿ ಉಳಿಯುವುದೇ ಸಾಧ್ಯವಿರಲಿಲ್ಲ, ಸಮಾಜವಾದೀ ಮುನ್ನಡೆಯ ಗೆಲುವು ಸಾಧನೆ ಸಾಧ್ಯವಿರಲಿಲ್ಲ ಎಂಬ ಸಂಗತಿಯನ್ನೂ ನೆನಪಿಟ್ಟುಕೊಳ್ಳಬೇಕು. ಪಕ್ಷದ ಮತ್ತು ಕಾರ್ಮಿಕ ವರ್ಗದ ಮುಂದಾಳುತ್ವದ ಪಾತ್ರವನ್ನು ಕಾದುಕೊಳ್ಳಬೇಕು"

ಮುಂದುವರಿಯುತ್ತಾ ನಿರ್ಣಯ ಹೀಗಂದಿದೆ. "ಆರ್ಥಿಕ ಪುನರ್ರಚನೆಯ ಅಗತ್ಯ ಸ್ಥಗಿತತೆ ಮತ್ತು ಉತ್ಪಾದನಾ ಶಕ್ತಿಗಳು ಮತ್ತು ಉತ್ಪಾದನಾ ಸಂಬಂಧಗಳ ನಡುವೆ ಪರಸ್ಪರ ತಾಳಮೇಳವಿಲ್ಲದ್ದರಿಂದ ಬಂತು. ಸಮಾಜವಾದೀ ಸಮಾಜದಲ್ಲಿ ಪರಸ್ಪರ ವೈರಪೂರ್ಣ ವರ್ಗಗಳು ಇಲ್ಲವಾದ್ದರಿಂದ ಸನ್ನಿವೇಶಕ್ಕೆ ಅನುಗುಣವಾಗಿ ಸಮಾಜವಾದೀ ಸಂಬಂಧಗಳನ್ನು ಬೆಳೆಸುವಲ್ಲಿ ಆದ ಸಂಘಟನಾತ್ಮಕ ವಿಫಲತೆಯಿಂದಾಗಿ ಇದು ಬಂತು.... ಈಗ ತಗೊಳ್ಳುವ ಕ್ರಮಗಳು ಈ ವ್ಯಾಧಿಯ ಮೂಲಕ್ಕೇ ಏಟು ಕೊಡುವಂಥದ್ದಾಗಿರಬೇಕು. ಸಮಾಜವಾದೀ ಸಮಾಜದಲ್ಲಿ ಸಮತಾ ವಾದದ ಮೊದಲ ಹಂತದ ಅವಧಿಯಾದ್ದಂತ ವೈಯುಕ್ತಿಕ ಉತ್ತೇಜನ ಅನಿವಾರ್ಯವಾದರೂ ಸಮಾಜವಾದೀ ಪ್ರಜ್ಞೆ ಬೆಳೆಸದೆ ಪ್ರಗತಿಯನ್ನು ಕಾದುಕೊಳ್ಳುವುದು ಕೂಡಾ ಸಾಧ್ಯವಿಲ್ಲ. ಉತ್ಪಾದನಾ ಶಕ್ತಿಗಳು ಮತ್ತು ಉತ್ಪಾದನಾ ಸಂಬಂಧಗಳ ನಡುವಿನ ತಾಳ-ಮೇಳ ಮರುಸ್ಥಾಪಿಸುವಲ್ಲಿ ಸಮಾಜವಾದೀ ಪ್ರಜ್ಞೆ ದೊಡ್ಡ ಪಾತ್ರ ವಹಿಸಬೇಕು"

ಸದ್ಯದ ತೊಂದರೆಗಳು ಮತ್ತು ಬದಲಾವಣೆಗಳನ್ನು ದುರ್ಲಾಭ ಪಡೆಯಲು ಸಮಾಜವಾದ-ವಿರೋಧಿ ಶಕ್ತಿಗಳು ಪ್ರಯತ್ನಿಸುತ್ತಿವೆ. ಸಮಾಜವಾದೀ ವ್ಯವಸ್ಥೆಗಾಗಲಿ, ಬಂಡವಾಳ ಶಾಹಿ ವ್ಯವಸ್ಥೆಗಾಗಲಿ ಒಂದೇ ರೀತಿಯ ಸಮಸ್ಯೆಗಳಿವೆ. ಅವುಗಳ ನಡುವೆ ವ್ಯತ್ಯಾಸ ಸುಮಾರಾಗಿ ಇಲ್ಲವೇ ಇಲ್ಲ ಎನ್ನುತ್ತವೆ ಈ ಶಕ್ತಿಗಳು. ಸಮಾಜವಾದೀ ಸಮಾಜ ಬಂಡವಾಳ ಶಾಹೀ ಸಮಾಜಕ್ಕಿಂತ ಉತ್ತಮ ಎಂಬ ವಾದವನ್ನು ಇತ್ತೀಚಿನ ಘಟನೆಗಳು ತಪ್ಪೆಂದು ತೋರಿಸಿವೆ ಎನ್ನುತ್ತಿದ್ದಾರೆ ಅವರು.

ಈ ಎರಡು ವ್ಯವಸ್ಥೆಗಳ ನಡುವೆ ಒಂದು ಗುಣಾತ್ಮಕ ವ್ಯತ್ಯಾಸವಿದೆಯೆಂಬ ವಾಸ್ತವತೆಯನ್ನು ಅವರು ಉದ್ದೇಶಪೂರ್ವಕವಾಗಿಯೇ ನಿರ್ಲಕ್ಷಿಸುತ್ತಾರೆ. ಸಿ.ಪಿ.ಐ.(ಎಂ)ನ 13ನೇ ಮಹಾಧಿವೇಶನದ ರಾಜಕೀಯ ಠರಾವು ಹೇಳಿರುವಂತೆ "ಸಮಾಜವಾದೀ ದೇಶಗಳ ತೊಂದರೆಗಳು ಬಂಡವಾಳಶಾಹಿ ಬಿಕ್ಕಟ್ಟಿನಂತೆ ವ್ಯವಸ್ಥೆಯಲ್ಲೇ ಅಡಕವಾಗಿರುವ ದೌರ್ಬಲ್ಯಗಳಲ್ಲ. ಬದಲಾಗಿ ಸಮಾಜವಾದೀ ಅಭಿವೃದ್ಧಿಯ ನಿಯಮಗಳ ಉಲ್ಲಂಘನೆಯಿಂದ ಇದು ಉಂಟಾಗುತ್ತವೆ ಎಂಬುದು ವಾಸ್ತವ ಸಂಗತಿ. ಆದ್ದರಿಂದ ಈ ತೊಂದರೆಗಳನ್ನು ನಿವಾರಿಸುವುದು ಮತ್ತು ತ್ವರಿತ ಪ್ರಗತಿ ಸಾಧಿಸುವುದು ಸಮಾಜವಾದೀ ಸಮಾಜಕ್ಕೆ ಸಾಧ್ಯ. ಯಾಕೆಂದರೆ ಉತ್ಪಾದನಾ ಸಾಧನಗಳ ಒಡೆತನ, ಹತೋಟಿ ಸಮಾಜದ ಕೈಯಲ್ಲಿರುತ್ತದೆ. ವೈರಪೂರ್ಣ ವೈರುಧ್ಯಗಳು ಸಮಾಜವಾದೀ ಸಮಾಜದಲ್ಲಿ ಇಲ್ಲ. ಆದ್ದರಿಂದ ಉತ್ಪಾದನಾ ಶಕ್ತಿಗಳ ಪೂರ್ಣ ಸಾಮರ್ಥ್ಯ ಸಾಧಿಸುವಂತೆ ಉತ್ಪಾದನೆಯನ್ನು ಯೋಜಿಸುವುದು ಸಾಧ್ಯ.


ತಮ್ಮ ಆರ್ಥಿಕ ತೊಂದರೆಗಳ ಹಿನ್ನೆಲೆಯಲ್ಲಿ ಈ ಎರಡು ವ್ಯವಸ್ಥೆಗಳ ಭಿನ್ನ ನಿಲುವುಗಳು, ಧೋರಣೆಗಳು ಸಮಾಜವಾದೀ ವ್ಯವಸ್ಥೆಯ ಹಿರಿಮೆಯನ್ನು ತೋರ್ಪಡಿಸುತ್ತವೆ. ತಮ್ಮ ಆರ್ಥಿಕ ತೊಂದರೆಗಳನ್ನು ಸಾಮ್ರಾಜ್ಯಶಾಹಿಗಳು ಹೇಗೆ ನಿವಾರಿಸಬಯಸುತ್ತವೆ? ತಮ್ಮ ಕಾರ್ಮಿಕರ ಮೇಲೆ ನಿರುದ್ಯೋಗ ಹೇರಿ, ಮೂರನೇ ಜಗತ್ತಿನ ದೇಶಗಳನ್ನು ಶೋಷಿಸಿ ಅಷ್ಟೇ ಅಲ್ಲ, ತಮ್ಮ ಜನಗಳು ಹಸಿದಿರುವಾಗ ಮಿಲಿಟರಿಗಾಗಿ ಶತಕೋಟಿ-ಕೋಟಿ ಡಾಲರುಗಳನ್ನು ಸುರಿದು! ಬಂಡವಾಳಶಾಹಿ ದೇಶಗಳ ಶಸ್ತ್ರಾಸ್ತ್ರ ವ್ಯಾಪಾರ ಸಿರಿವಂತಿಕೆ ಪಡೆಯುವ ಒಂದು ಅತ್ಯಂತ ಲಾಭಕಾರೀ ಮೂಲ. ವಿಶ್ವಾದ್ಯಂತ ಅತ್ಯಾಧುನಿಕ ಶಸ್ತ್ರಾಸ್ತ್ರಗಳಲ್ಲಿ ವ್ಯಾಪಾರ, ಮೂರನೇ ಜಗತ್ತಿನ ದೇಶಗಳ ನಡುವೆ ಘರ್ಷಣೆಗಳಿಗೆ ಕುಮ್ಮಕ್ಕು ನೀಡುವುದು, ಆ ಮೂಲಕ ಅವನ್ನು ತಮ್ಮ ಅಧೀನಗೊಳಿಸುವುದು, ಖಾಲಿಸ್ತಾನಿಗಳಂತಹ

ಮುಂದೆ ◄



ವರ್ಗ ವೈರುಧ್ಯ

[illegible] ... ಅದರ 1886ರ ಮೇ ದಿನಗಳಲ್ಲಿ ... [illegible] ... 1886ರ ... [illegible]



ಮೇ ದಿನದ ಪ್ರತಿಜ್ಞೆ

ಈ ಮೇ ದಿನದಂದು ಭಾರತದ ಕಾರ್ಮಿಕ ವರ್ಗ ಮತ್ತೆ ತ್ರಿವಿಧ ಕರ್ತವ್ಯ ನಿರ್ವಹಿಸಬೇಕಾಗಿದೆ. -- ತನ್ನ ತಕ್ಷಣದ ಹಿತಾಸಕ್ತಿಗಳನ್ನು ಕಾದುಕೊಳ್ಳುವುದು, ದೇಶದ ಸಮಗ್ರತೆ ಮತ್ತು ಐಕ್ಯತೆಯನ್ನು ಕಾಪಾಡುವುದು ಮತ್ತು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸುವುದು.

ಕಳೆದ ಮೇದಿನದ ನಂತರದ ಒಂದು ವರ್ಷದಲ್ಲಿ, ಸಾಮ್ರಾಜ್ಯಶಾಹಿ ಏಜೆಂಟರು, ಧಾರ್ಮಿಕ ಮೂಲಭೂತವಾದಿಗಳು, ಹಿಂದೂ, ಮುಸ್ಲಿಂ, ಸಿಖ್ ಕೋಮುವಾದಿಗಳಿಂದ ದೇಶದ ಐಕ್ಯತೆಯ ಮೇಲೆ ಆಕ್ರಮಣಗಳು

ನಿಹಾರದಲ್ಲಿ, ಗ್ರಾಮೀಣ ಜನಸಮೂಹಗಳ ವಿರುದ್ಧ ಭೂಮಾಲಿಕರ ಏಜೆಂಟರು ಮತ್ತು ಪೋಲೀಸ್ ಕೂಟದ ಭಯೋತ್ಪಾದನೆ ಕಾಂಗ್ರೆಸ್ (ಐ) ಆಳ್ವಿಕೆಯಲ್ಲಿ ಪ್ರಜಾಪ್ರಭುತ್ವದ ನಿಜ ಸ್ವರೂಪವನ್ನು ತೋರಿಸುತ್ತದೆ.

ಕೇರಳ, ಆಂಧ್ರ ಮತ್ತಿತರ ಕಡೆಗಳಲ್ಲಿ ಸಂವಿಧಾನದ ಬಹಿರಂಗ ಉಲ್ಲಂಘನೆ ನಡೆಸಿ ರಾಜ್ಯಪಾಲರ ಹುದ್ದೆಯನ್ನು ದುರುಪಯೋಗಪಡಿಸಿಕೊಂಡು ಚುನಾಯಿತ ಮಂತ್ರಿಮಂಡಲಗಳ ಕೆಲಸದಲ್ಲಿ ರಾಜೀವ್

ಸಮರದಲ್ಲಿ, ಈಗ ಕಾರ್ಮಿಕ ವರ್ಗಕ್ಕೆ ವಿಶಾಲ ಜನ ವಿಭಾಗಗಳಿಂದ ಮಿತ್ರರು ದೊರಕುತ್ತಿದ್ದಾರೆ.

ತನ್ನ ಕುಕೃತ್ಯಗಳಿಗೆ ಮುಕುಟವಿಟ್ಟಂತೆ ರಾಜೀವ ಸರ್ಕಾರ ಯೂನಿಯನ್ ಕಾರ್ಬೈಡ್‌ನೊಂದಿಗೆ ಒಂದು ವ್ಯವಹಾರ ಕುದುರಿಸಿ ಅನಿಲ ದುರಂತ ಪೀಡಿತರಿಗೆ ವಿಶ್ವಾಸಘಾತ ಮಾಡಿದೆ. ಈ ಬಹು ರಾಷ್ಟ್ರೀಯ ಕಂಪನಿಯ ಕಾಲಿಗೆರಗಿದೆ.

ರಿಟ್ರೆಂಚ್‌ಮೆಂಟ್, ಹೊಸ ನೇಮಕಾತಿ ಮೇಲೆ ನಿರ್ಬಂಧ, ಶ್ರಮಭಾರ ಹೆಚ್ಚಳ ಮುಂತಾದ ಧೋರಣೆ ಅನುಸರಿಸುತ್ತಿದೆ. ಹೆಚ್ಚಿನ ಶ್ರಮಭಾರ, ವೇತನ ಕಡಿತ ಒಪ್ಪಿಕೊಳ್ಳುವಂತೆ ಕಾರ್ಮಿಕರನ್ನು ಹೆದರಿಸಲು ದೀರ್ಘ ಲಾಕೌಟ್‌ನ ಅಸ್ತ್ರ ಬಳಸಲಾಗುತ್ತಿದೆ. ಈ ನಡುವೆ ಉದ್ಯೋಗದ ಮಾರುಕಟ್ಟೆಗೆ ಲಕ್ಷಾಂತರ ಹೊಸಬರ ಪ್ರವೇಶ. ಅವರಲ್ಲಿ ಯಾರಿಗೂ ಉದ್ಯೋಗದ ಸಾಧ್ಯತೆಯಿಲ್ಲದ ಸ್ಥಿತಿ.

ಎಲ್ಲಾ ಕೇಂದ್ರಕಾರ್ಮಿಕ ಸಂಘಟನೆಗಳ, ಒಕ್ಕೂಟಗಳ ಒಂದು ಮಹಾ ಸಂಘ ರಚಿಸಬೇಕೆಂದು ಸಿ.ಐ.ಟಿ.ಯು. ಮತ್ತೊಮ್ಮೆ ಕರೆ ನೀಡುತ್ತದೆ. ಉದ್ಯೋಗದ ಹಕ್ಕು ಮೂಲಭೂತ ಹಕ್ಕೆಂದು ಪರಿಗಣಿಸಬೇಕು. ತಕ್ಷಣ ನಿರುದ್ಯೋಗ ಪರಿಹಾರ. ಮುಚ್ಚಿರುವ ಸೆಣಬು, ಬಟ್ಟೆ ಗಿರಣಿಗಳನ್ನು ತೆರೆಯಬೇಕು. ಎಲ್ಲಾ ಬೀಗ ಮುದ್ರೆಗಳ ತೆರವು. ಸೆಣಬು, ಬಟ್ಟೆ, ಸಕ್ಕರೆ ಉದ್ದಿಮೆಗಳ ರಾಷ್ಟ್ರೀಕರಣ. ಅಸಂಘಟಿತ ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಶಾಸನ. ಕ್ಷಾಮಗ್ರ, ವಿದ್ಯುತ್‌ಮಗ್ಗ ಕಾರ್ಮಿಕರಿಗೆ ತುರ್ತು ಪರಿಹಾರ. ಮಹಿಳಾ ಕಾರ್ಮಿಕರಿಗೆ

ರಾಷ್ಟ್ರೀಯ ಐಕ್ಯತೆಯ ಬಾವುಟ ಎತ್ತಿಹಿಡಿಯಬೇಕು

ತೀವ್ರಗೊಂಡಿವೆ. ಬಿ.ಜೆ.ಪಿ., ಆರ್.ಎಸ್.ಎಸ್ ಶಿವಸೇನೆ, ಖಾಲಿಸ್ತಾನಿಗಳು, ಜಮಾತ್-ಎ-ಇಸ್ಲಾಮಿ ಇವೆಲ್ಲಾ ಈ ದುಷ್ಕಾರ್ಯದ ಲ್ಲಿ ತೊಡಗಿವೆ. ರಾಜೀವ ಸರ್ಕಾರದ ಸಮಯಸಾಧಕ, ದಿವಾಳಿಕೋರ ನೀತಿ ಈ ವಿಚ್ಛಿದ್ರಕಾರಿ ಹಲ್ಲೆಗಳನ್ನು ತಡೆಯಲು ವಿಫಲಗೊಂಡಿದೆ. ಆದ್ದರಿಂದ ದೇಶವನ್ನು ಉಳಿಸುವ ಜವಾಬ್ದಾರಿ ಬಹುಪಾಲು ಕಾರ್ಮಿಕ ವರ್ಗದ ಹೆಗಲ ಮೇಲೆಯೇ ಬಿದ್ದಿದೆ. ಪಂಜಾಬ್, ತ್ರಿಪುರಾ, ಡಾರ್ಜಿಲಿಂಗ್ ಜಿಲ್ಲೆ, ಅಸ್ಸಾಮಿನಲ್ಲಿ ಕಾರ್ಮಿಕ ವರ್ಗದ ಕಾರ್ಯಕರ್ತರು ತಮ್ಮ ರಕ್ತ ಚೆಲ್ಲಿ ಭಾರತವನ್ನು, ಭಾರತದ ಐಕ್ಯತೆಯನ್ನು ರಕ್ಷಿಸುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಎಲ್ಲಾ ರಾಜ್ಯಗಳ, ಕೇಂದ್ರ ಕಾರ್ಮಿಕಸಂಘಟ ನೆಗಳ, ಒಕ್ಕೂಟಗಳ ಎಲ್ಲಾ ಕಾರ್ಮಿಕರು ರಾಷ್ಟ್ರೀಯ ಐಕ್ಯತೆಗಾಗಿ ಒಂದಾಗಿ ನಿಂ ತು ಕೋಮುವಾದಿ ವಿಚ್ಛಿದ್ರಕಾರಿ ಶಕ್ತಿಗಳನ್ನು ಪರಾಭವಗೊಳಿಸಬೇಕು. ಕಾರ್ಮಿಕರ ಕಾರ್ಮಿಕ ವರ್ಗ ಒಂದಾಗಿ ನಿಂತರೆ ಇದು ಸುಲಭಸಾಧ್ಯ.

> ಕಾರ್ಮಿಕವರ್ಗದ ಕಾರ್ಯಕರ್ತರು ಭಾರತವನ್ನುರಕ್ಷಿಸುವುದು ಹೇಗೆ ಎಂದು ತೋರಿಸಿ ಕೊಟ್ಟಿದ್ದಾರೆ.

ಪ್ರಜಾಪ್ರಭುತ್ವದ ರಕ್ಷಣೆ ಕಾರ್ಮಿಕ ವರ್ಗದ ಮೇಲಿರುವ ಇನ್ನೊಂದು ಮಹತ್ವಪೂರ್ಣ ಜವಾಬ್ದಾರಿ. ತ್ರಿಪುರಾದಲ್ಲಿ, ರಾಜೀವ್ ಸರ್ಕಾರ ಹರಿಯಬಿಟ್ಟ ಭಯೋತ್ಪಾದನೆ ಕಾಂಗ್ರೆಸ್ (ಐ)ನೊಳಗೆ ಸರ್ವಾಧಿಕಾರಿ ಪ್ರವೃತ್ತಿ ಬೆಳೆಯುತ್ತಿರುವುದನ್ನು ಬಯಲಿಗೆಳೆದಿದೆ. ಅವಕಾಶ ಸಿಕ್ಕರೆ ಭಾರತೀಯ ಪ್ರಜಾಪ್ರಭುತ್ವಕ್ಕೆ ಕೈಕೊಟ್ಟು, ಏಕ ಪಕ್ಷ ಸರ್ವಾಧಿಕಾರವನ್ನು ಹೇರಲುಅದು ಹೇಸುವುದಿಲ್ಲ. ಜನತೆಯ ಪ್ರಜಾಪ್ರಭುತ್ವ ಮತ್ತುಮೂಲಭೂತ ಹಕ್ಕುಗಳಮೇಲೆ ಅದು ವ್ಯವಸ್ಥಿತ ಆಕ್ರಮಣ ನಡೆಸುತ್ತಿದೆ.

ಸರ್ಕಾರ ಅಧ್ವಯುಂಟುಮಾಡುತ್ತಿದೆ. ಕೇರಳ, ಪಶ್ಚಿಮ ಬಂಗಾಳ ಸರ್ಕಾರಗಳ ವಿರುದ್ಧ ನೀಚ ಅಪಪ್ರಚಾರ ನಡೆಸುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ (ಐ) ಶಸ್ತ್ರ ಎತ್ತಿಕೊಳ್ಳಲು ಕರೆ ನೀಡಿದೆ.

ಇದೇ ವೇಳೆಗೆ ಸಂಸತ್ತಿನ ಅಧಿಕಾರಗಳನ್ನು ಮೊಟಕುಗೊಳಿಸಿ ಕಾರ್ಯಾಂಗದಲ್ಲಿ ಎಲ್ಲಾ ಅಧಿಕಾರಗಳ ಕೇಂದ್ರೀಕರಣ ನಡೆಸಲು ಹೊಸಹೊಸ ಕ್ರಮಗಳನ್ನು ಅನುಸರಿಸುತ್ತಿದೆ. ಹಲವು ವಿಧಾನಗಳನ್ನು ಬಳಸಿ ರಾಜ್ಯಗಳ ಸಂವಿಧಾನದತ್ತ ಅಧಿಕಾರಗಳನ್ನು ಮೊಟಕುಗೊಳಿಸಿ ರಾಜ್ಯಸರ್ಕಾರಗಳ ಮೇಲೆ ಕೇಂದ್ರದ ಸರ್ವಾಧಿಕಾರ ಸ್ಥಾಪಿಸಲು ಪ್ರಯತ್ನಿಸಲಾಗುತ್ತಿದೆ. ಕಾರ್ಮಿಕ ವರ್ಗ ಪ್ರಜಾಪ್ರಭುತ್ವದ ಮೇಲಿನ ಈ ಆಕ್ರಮಣಗಳನ್ನು ನಿವಾರಿಸಬೇಕಾಗಿದೆ. ಕಾರ್ಮಿಕ ವರ್ಗಗಳ ಮತ್ತು ಅದರ ಸಂಘಟನೆಗಳ ಸರ್ವಸಾಮಾನ್ಯ ಕಾರ್ಯಾಚರಣೆಯ ಮೂಲಕ ಜನಸಾಮಾನ್ಯರ ಮೂಲಭೂತ ಹಕ್ಕುಗಳನ್ನು ರಕ್ಷಿಸಬೇಕಾಗಿದೆ.

ಜನಸಾಮಾನ್ಯರ ಹಕ್ಕುಗಳನ್ನು ರಕ್ಷಿಸುವ, ಅವರ ಸ್ವಾತಂತ್ರ್ಯಗಳನ್ನು ಮೊಟಕುಮಾಡಲು ನಿರಾಕರಿಸುವ ಕೇರಳ ಮತ್ತು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರಗಳು ತಮ್ಮ ಭಿನ್ನ ಧೋರಣೆಗಳಿಂದಾಗಿ ಜನಸಾಮಾನ್ಯರಿಗೆ ಹೆಚ್ಚೆಚ್ಚು ಪ್ರಿಯವಾಗುತ್ತಿವೆ. ಕಾರ್ಮಿಕ ವರ್ಗ ಇವನ್ನು ಪೂರ್ಣವಾಗಿ ಬೆಂಬಲಿಸಬೇಕು. ಅವುಗಳ ಸಾಧನೆಗಳನ್ನು ಜನಜನಿತಗೊಳಿಸಬೇಕು.

ನಾಗರಿಕಹಕ್ಕುಗಳು, ಸಂಘಟನೆಯಹಕ್ಕುಗಳ ಮೇಲಾಗುತ್ತಿರುವ ವ್ಯಾಪಕ ಆಕ್ರಮಣಗಳನ್ನು ಕಾರ್ಮಿಕ ವರ್ಗ ಪ್ರತಿಭಟಿಸಬೇಕು. ಇಂದು ಕಾರ್ಮಿಕರಷ್ಟೇ ಅಲ್ಲ, ಶಿಕ್ಷಕರು, ಪ್ರೊಫೆಸರುಗಳು, ವಕೀಲರು, ಇಂಜನಿಯರುಗಳು ಅಥವಾ ತನ್ನ ಬೇಡಿಕೆಗಳಿಗಾಗಿ ಹೋರಾಡುವ, ರಾಜೀವ ಸರ್ಕಾರದ ಸ್ವೇಚ್ಛಾಚಾರೀ ಕ್ರಮಗಳನ್ನು ಪ್ರತಿಭಟಿಸುವ ಯಾವುದೇ ಜನವಿಭಾಗ ರಾಜೀವ ಸರ್ಕಾರದ ಲಾಠಿ ಬೀಸುವ ಪೋಲೀಸರಿಂದ ತಪ್ಪಿಸಿಕೊಳ್ಳಲಾರದಂತಹ ಸ್ಥಿತಿ ಇದೆ. ರಾಜೀವ ಸರ್ಕಾರದ ವಿರುದ್ಧ ಸರ್ವಜನರ

ಕಾರ್ಮಿಕ ವರ್ಗ ಇದನ್ನು ಪ್ರತಿಭಟಿಸಬೇಕು. ಬೊಫೋರ್ಸ್ ಹಗರಣದಲ್ಲಿ ಬಯಲಾದ ಭ್ರಷ್ಟ ನಡವಳಿಕೆಗಳನ್ನು ಖಂಡಿಸಬೇಕು.

ಅದಕ್ಕೆ, ದಿವಾಳಿಕೋರ ನೀತಿಯ ರಾಜೀವ ಸರ್ಕಾರ ತುರ್ತಿನ ಯಾವದೇ ಸಮಸ್ಯೆಯನ್ನು ಬಗೆಹರಿಸಲಾರದೆ ದೇಶವನ್ನು ದೊಡ್ಡ ಅಪಾಯಕ್ಕೆ ಈಡುಮಾಡಿದೆ. ಸ್ವಾರ್ಥಪ್ರೇರಿತವಾದ ಅದರ ಪಂಜಾಬ್ ಧೋರಣೆ ಎಷ್ಟೊಂದು ಅಪಾಯಕಾರಿಯೆಂದು ಸಾಬೀತಾಗಿದೆ. ತಿಂಗಳು ಕಳೆದಂತೆ ಪರಿಸ್ಥಿತಿ ಹದಗೆಡುತ್ತಿದೆ. ಕಾಶ್ಮೀರದಲ್ಲಿ ರಾಷ್ಟ್ರ ವಿರೋಧಿ ಮತ್ತು ಸಮಯ ಸಾಧಕ ಶಕ್ತಿಗಳ ನಡುವೆ ಆಟವಾಡುವ ದಿವಾಳಿಕೋರ ನೀತಿಯಿಂದ ಮತ್ತೆ ಒಂದು ಪ್ರತ್ಯೇಕತಾವಾದಿ ಬಿಕ್ಕಟ್ಟನ್ನು ಅದು ಸೃಷ್ಟಿಸಿದೆ. ಉತ್ತರ ಪ್ರದೇಶದಲ್ಲಿ ಅದರ ಸ್ವಾರ್ಥಸಾಧಕ ನೀತಿ ರಾಮ ಜನ್ಮಭೂಮಿ- ಬಾಬ್ರಿ ಮಸೀದಿಯ ಪ್ರಶ್ನೆಯ ಮೇಲೆ ಸ್ಫೋಟಕ ಪರಿಸ್ಥಿತಿ ನಿರ್ಮಿಸಿದೆ. ಕಾರ್ಮಿಕ ವರ್ಗ ಈ ಧೋರಣೆಗಳ ವಿರುದ್ಧ ಹೋರಾಡಬೇಕಾಗಿದೆ. ರಾಷ್ಟ್ರೀಯ ವಿಘಟನೆಯ ಈ ಸರ್ಕಾರದ

> ರಾಜೀವ್ ಸರಕಾರದ ವಿರುದ್ಧ ಸರ್ವರ ಸಮರದಲ್ಲಿ ಈಗ ಕಾರ್ಮಿಕವರ್ಗಕ್ಕೆವಿಶಾಲ ವಿಭಾಗಗಳಿಂದಮಿತ್ರರು ದೊರಕುತ್ತಿದ್ದಾರೆ.

ಆಳ್ವಿಕೆಯನ್ನು ಕೊನೆಗೊಳಿಸಬೇಕಾಗಿದೆ.

ರಾಜೀವ್ ಸರ್ಕಾರದ ಆರ್ಥಿಕ ಧೋರಣೆಗಳಿಂದ 1 ಲಕ್ಷ 60 ಸಾವಿರಕ್ಕೂ ಹೆಚ್ಚು ಕಾರ್ಖಾನೆಗಳು ಮುಚ್ಚಿವೆ. ಲಾಕೌಟ್, ಕ್ಲೋಶರ್‌ಗಳು ಹೆಚ್ಚಿವೆ. ನಗರಗಳ ಮೂರು ಕೋಟಿಗೂ ಮಿಕ್ಕಿದ ನಿರುದ್ಯೋಗಿಗಳಿಗೆ ಯಾವ ಪರಿಹಾರವೂ ಇಲ್ಲ. ಆಧುನೀಕರಣ, ರಿಟ್ರೆಂಚ್‌ಮೆಂಟ್‌ಗಳೆಲ್ಲಾ ಉದ್ದಿಮೆಗಳಲ್ಲಿ ಉದ್ಯೋಗಾವಕಾಶಗಳನ್ನು ಇಳಿಸಿವೆ. ಕಂಪ್ಯೂಟರೀಕರಣ ನೌಕರರ ಉದ್ಯೋಗದ ಮೇಲೆ ಭಾರೀ ವಿಪತ್ತು ತಂದಿದೆ. ಸ್ವತಃ ಸರ್ಕಾರವೇ

ಇಷ್ಟೇ ಸಾಲದೇನೋ ಎಂಬಂತೆ ಆವಶ್ಯಕ ಸಾಮಗ್ರಿಗಳ ಸತತ ಬೆಲೆಯೇರಿಕೆ. ಈಗಾಗಲೇ ಸಂಕಟ ಪೀಡಿತ ಜೀವನ ಇನ್ನಷ್ಟು ದುರ್ಭರಗೊಳ್ಳುತ್ತಿದೆ. ಬೆಲೆ ನಿರ್ಧಾರಣಾ ವಿಧಾನವನ್ನು ಕಾರ್ಮಿಕರ ಗಳಿಕೆಯ ಒಂದು ಭಾಗವನ್ನು ವಂಚಿಸುವರೀತಿಯಲ್ಲಿ ಬಳಸಲಾಗುತ್ತಿದೆ. ಸರ್ಕಾರದ ಇತ್ತೀಚಿನ ಮೋಸದ ಆಕ್ರಮಣವೆಂದರೆ ಅದು ಹೊಸದಾಗಿ ಜಾರಿಮಾಡಿದ ಕಪಟ ಗ್ರಾಹಕ ಬೆಲೆ ಸೂಚ್ಯಂಕ. ಈ ಮೂಲಕ ತುಟ್ಟಿಭತ್ಯೆಯನ್ನು ಕಡಿಮೆ ಮಾಡಿ ಕಾರ್ಮಿಕರನ್ನು ಸುಲಿಯುತ್ತಿದೆ. ಈ ಮೋಸದ ಸೂಚ್ಯಂಕವನ್ನು ಎಲ್ಲಾ ಕೇಂದ್ರ ಕಾರ್ಮಿಕರ ಸಂಘಟನೆಗಳುಪ್ರತಿಭಟಿಸಿವೆ.

ಇತ್ತೀಚಿನ ಬಜೆಟ್ ತೋರಿಸಿರುವಂತೆ ಈ ವರ್ಷ ಜನತೆಗೆ ಯಾವ ಪರಿಹಾರವೂ ದೊರೆಯಲಾರದು . ತೆರಿಗೆ ಹೊರೆ ಹೆಚ್ಚಿದೆ . ಖೋತಾ ಹಣಕಾಸು ಬೆಲೆಗಳನ್ನು ಏರಿಸುತ್ತದೆ. ಆಮದು ಉದಾರೀಕರಣ ನೀತಿ ಭಾರತೀಯ ಉದ್ದಿಮೆಗಳನ್ನು ತೀವ್ರವಾಗಿ ತಟ್ಟಿ ಉದ್ಯೋಗಾವಕಾಶ ಇಳಿದಿರುತ್ತದೆ . ಹೆಚ್ಚುತ್ತಿರುವ ವಿದೇಶಸಾಲ ಮರುಪಾವತಿಯಿಂದಾಗಿ ಭಾರತ ತನ್ನ ರಫ್ತುಗಳನ್ನು ಅತ್ಯಂತ ನಿಕೃಷ್ಟ ದರದಲ್ಲಿ ಮಾರಬೇಕಗುತ್ತದೆ. ಆದ್ದರಿಂದಕಾರ್ಮಿಕವರ್ಗ ತನ್ನ ಜೀವನ ಮಟ್ಟವನ್ನು ರಕ್ಷಿಸಿಕೊಳ್ಳಬೇಕಾದರೆನಿರಂತರಹೋರಾಟಕ್ಕೆ ಸಿದ್ಧವಾಗಿರಬೇಕಾಗುತ್ತದೆ . ಇದಕ್ಕೆ ಇನ್ನು ಬಲವಾದ ಐಕ್ಯತೆ ಮತ್ತು ಬಲವಾದ ಕಾರ್ಮಿಕ ಆಂದೋಲನದ ಅಗತ್ಯವಿದೆ .

ಈ ವರ್ಷ ಕಾರ್ಮಿಕ ವರ್ಗ ತನ್ನ ಹೆಚ್ಚುತ್ತಿರುವ ಐಕ್ಯತೆ ಮತ್ತು ಟ್ರೇಡ್ ಯೂನಿಯನ್ ಶಕ್ತಿಯಿಂದಾಗಿ ಸಾರ್ವಜನಿಕ ವಲಯ ಮತ್ತು ಇತರೆಡೆ ಹಲವಾರು ವೇತನ ಇತ್ಯರ್ಥ ಪಡೆಯುವುದು ಸಾಧ್ಯವಾಗಿದೆ. ಇದು ಹೆಚ್ಚುತ್ತಿರುವ ಐಕ್ಯತಾ ಪ್ರಜ್ಞೆಗೊಂದು ಕಾಣಿಕೆ . ಇದಕ್ಕಾಗಿ ಕಾರ್ಮಿಕ ಸಂಘಗಳಿಗೆ , ರಾಷ್ಟ್ರೀಯ ಆಂದೋಲನ ಸಮಿತಿಯ ಕೇಂದ್ರಕಾರ್ಮಿಕ ಸಂಘಗಳಿಗೆ ಮತ್ತು ಒಕ್ಕೂಟಗಳಿಗೆ ಸಿ.ಐ.ಟಿ.ಯು.ವಿನ ಅಭಿನಂದನೆಗಳು . ನಮ್ಮ ಕಾರ್ಮಿಕ ಆಂದೋಲನದ ಸಮಗ್ರ ಶಕ್ತಿಯ ಒಗ್ಗಟ್ಟಿಗಾಗಿ

ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಪಕ್ಷಪಾತದ ನಿರ್ಮೂಲನೆ. ಆಮದು ಉದಾರೀಕರಣ, ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶಕ್ಕೆ ಅವಕಾಶದ ಧೋರಣೆಗೆ ಅಂತ್ಯ. ಹಣದುಬ್ಬರದ ಬೆಲೆ ಏರಿಕೆ ನಿಲ್ಲಬೇಕು. ರೈತಾಪಿ ವರ್ಗಕ್ಕೆ ಅದರ ಸಾಲ ಹೊರೆಯಿಂದ ತಕ್ಷಣ ಪರಿಹಾರ. ಪ್ರತಿಫಲಕಾರೀ ಬೆಲೆ ಮತ್ತು ಭೂಸುಧಾರಣೆ -- ಈ ಬೇಡಿಕೆಗಳನ್ನು ಕಾರ್ಮಿಕ ವರ್ಗ ಒಂದಾಗಿ ಒತ್ತಾಯಿಸಬೇಕು ಎಂದು ಸಿ.ಐ.ಟಿ.ಯು. ಕರೆ ನೀಡುತ್ತದೆ.

ಈ ಬೇಡಿಕೆಗಳ ಸುತ್ತ ಬೃಹತ್ ಪ್ರಮಾಣದಲ್ಲಿ, ಐಕ್ಯ ಪ್ರತಿಭಟನೆ ನಡೆದರೆ ಮಾತ್ರವೇ ಪರಿಹಾರ ಗಳಿಸುವುದು ಸಾಧ್ಯ.

ರಾಜೀವ ಸರಕಾರದ ದೇಶ-ವಿರೋಧಿ, ಜನ-ವಿರೋಧಿ ಮತ್ತು ಕಾರ್ಮಿಕ-ವಿರೋಧಿ ಧೋರಣೆಗಳಿಂದಾಗಿ ಅದನ್ನು ತಕ್ಷಣ ಅಧಿಕಾರದಿಂದ ಇಳಿಸುವುದು ಅತ್ಯವಶ್ಯ. ಇದಕ್ಕೆ ಸಂಬಂಧಪಟ್ಟಂತೆ ಎಡಪಕ್ಷಗಳು ಮತ್ತು

> ಕಾರ್ಮಿಕ ವರ್ಗ ಜೀವನಮಟ್ಟ ರಕ್ಷಿಸಿಕೊಳ್ಳಬೇಕಾದರೆ ನಿರಂತರಹೋರಾಟಕ್ಕೆ ಸಿದ್ಧವಾಗಬೇಕು. ಇದಕ್ಕೆಇನ್ನೂ ಬಲವಾದ ಐಕ್ಯತೆ. ಬಲವಾದ ಕಾರ್ಮಿಕ ಆಂದೋಲನದ ಅಗತ್ಯವಿದೆ.

ಅವುಗಳ ಚಟುವಟಿಕೆಗಳ ಐಕ್ಯಶಕ್ತಿ ರೈತಾಪಿ ಜನಸಮೂಹಗಳನ್ನು ಮತ್ತು ಇತರರನ್ನು ಜಾಗೃತಗೊಳಿಸುತ್ತಿದೆ ಎಂಬುದನ್ನು ಸಿ.ಐ.ಟಿ.ಯು ಗಮನಿಸುತ್ತದೆ. ಎಡಪಕ್ಷಗಳು ಮುಂದಾಗದೆ, ಕಾರ್ಮಿಕವರ್ಗದ ಸಖ್ಯತೆಯೊಂದಿಗೆರೈತಾಪಿಜನಸಮೂಹಗಳನ್ನು ಜಾಗೃತಗೊಳಿಸದೆ ರಾಜೀವ್‌ಗಾಂಧಿ ಸರ್ಕಾರವನ್ನು ಸೋಲಿಸಬಲ್ಲ ಸಮರಶೀಲ ಶಕ್ತಿಗಳನ್ನು ಪೂರ್ಣವಾಗಿ ಒಟ್ಟುಗೂಡಿಸುವುದು ಸಾಧ್ಯವಿಲ್ಲ. ಎಲ್ಲ ಸಂದರ್ಭಗಳಲ್ಲು ಎಡಪಕ್ಷಗಳ ಸಾಮೂಹಿಕ ಕಾರ್ಯಾ

ಅಕ್ಟೋಬರ್ ಕ್ರಾಂತಿ ಮೊದಲು ಹಳೆಯ ವ್ಯವಸ್ಥೆಯನ್ನು ನಾಶಮಾಡುವುದು ಕಾರ್ಮಿಕ ವರ್ಗದ ಕರ್ತವ್ಯವಾಗಿತ್ತು. ರಷ್ಯದಲ್ಲಿ ಮತ್ತು ನಂತರ ಇತರ ದೇಶಗಳಲ್ಲಿ ಕ್ರಾಂತಿಯ ನಂತರ ಹೊಸ ಸಮಾಜವನ್ನು ಕಟ್ಟುವ ಜವಾಬ್ದಾರಿ ಕಾರ್ಮಿಕ ವರ್ಗದ್ದಾಯಿತು. ಇದರಿಂದ ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳಲ್ಲಿ ಮೇ ದಿನಾಚರಣೆಯ ಹೊಸ ಪರಂಪರೆಗಳು ಮೂಡಿಬಂದವು.1920 ರಿಂದ ಸೋವಿಯತ್ ಒಕ್ಕೂಟದಲ್ಲಿ ಮೇ 1 ಸಮಾಜದ ಒಳಿತಿಗಾಗಿ ಸ್ವಯಂಪ್ರೇರಿತ, ಹಾರ್ದಿಕ ಶ್ರದ್ಧಾಪೂರ್ವಕ ಕೆಲಸದ ದಿನವಾಯಿತು. ಅಲ್ಲಿನ ಕಮ್ಯುನಿಸ್ಟ್ ಪಕ್ಷದ 9 ನೇ ಮಹಾಧಿವೇಶನ ಮೇ 1 , 1920 ರಂದು ಅಖಿಲ ರಷ್ಯಾ ಸಬ್ಬೋತ್ನಿಕ್ ದಿನವಾಗಿ ಆಚರಿಸಬೇಕೆಂದು ನಿರ್ಣಯ ಅಂಗೀಕರಿಸಿತು. ಸಬ್ಬೋತ್ನಿಕ್ ಅಂದರೆ ಸಾರ್ವತ್ರಿಕ ಒಳಿತಿಗಾಗಿ ಒಂದು ದಿನ ಸಂಬಳ ಪಡೆಯದೆ ಸ್ವಯಂಸೇವಕರಾಗಿ ದುಡಿಯುವುದು. ಮೇ 1 ,1920 ರಂದು ಹಲವಾರು ಲಕ್ಷಕ್ಕೂ ಹೆಚ್ಚು ರಷ್ಯನ್ನರು ಇದರಲ್ಲಿ ಭಾಗವಹಿಸಿದರು. ಕಮ್ಯುನಿಸ್ಟರು ಇದಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟರು. ಲೆನಿನ್ ಕ್ರೆಮ್ಲಿನ್ ಮಿಲಿಟರಿ ಶಾಲೆಯ ವಿದ್ಯಾರ್ಥಿಗಳ ಜೊತೆಗೆ ಕ್ರೆಮ್ಲಿನ್ ಪ್ರದೇಶವನ್ನು ಸ್ವಚ್ಛಗೊಳಿಸುವಲ್ಲಿ ಪಾಲುಗೊಂಡರು. ಪಕ್ಕದ ಚಿತ್ರದಲ್ಲಿ ಅದನ್ನು ಕಾಣಬಹುದು.

ಸಮಾಜವಾದೀ ವ್ಯವಸ್ಥೆಯಲ್ಲಿ



ಮಾಸ್ಕೋದ ಕೆಂಪು ಚೌಕದಲ್ಲಿ ಪ್ರತಿ ವರ್ಷ ನಡೆಯುವ ಮೇ ದಿನಾಚರಣೆಯ ದೃಶ್ಯ.



ಮೇ ದಿನ 1989

ಪುಟ III ರಿಂದ

ಬಂಡವಾಳಶಾಹೀ ಒಂದು ಹಳಸಲಾದ ಬರ್ಬರ ವ್ಯವಸ್ಥೆ ಎಂದು ಇತಿಹಾಸ ಈಗಾಗಲೇ ತೀರ್ಪು ಘೋಷಿಸಿದೆ. ಇಂದು ಆ ವ್ಯವಸ್ಥೆಯನ್ನು ಸಮರ್ಥಿಸಲು ತವಕ ಪಡುವವರು ಅದನ್ನು ಎತ್ತಿ ನಿಲ್ಲಿಸಲು ಪ್ರಯತ್ನಿಸುತ್ತಿರುವಾಗ ಇತಿಹಾಸದ ಈ ಘೋಷಿತ ತೀರ್ಪನ್ನು ದೇಶಾದ್ಯಂತ ಕಾರ್ಮಿಕ ವರ್ಗ ಪುನರುಚ್ಚರಿಸಬೇಕು.

ಪ್ರತಿಗಾಮೀ ದೇಶದ್ರೋಹಿಗಳಿಗೆ ಹಣಕಾಸು ನೆರವು ಒದಗಿಸುವುದು, ಅಂಗೋಲಾ, ಅಫ್‌ಘಾನಿಸ್ತಾನದಲ್ಲಿ ಮಾಡುತ್ತಿರುವಂತೆ ತಮ್ಮ ಪಪ್ಪೆಟರನ್ನು ಅಧಿಕಾರದಲ್ಲಿ ಕೂರಿಸಲು ಲೂಟಿ, ಬೆಂಕಿ, ಕೊಲೆಗಳ ಸರಣಿಯನ್ನೇ ಹರಿಯ ಬಿಡುವುದು- ಇದು ಸಾಮ್ರಾಜ್ಯಶಾಹೀ ದೇಶಗಳ ರಾಜಕೀಯ ಮತ್ತು ನೀತಿವಂತಿಕೆ! ಇಂತಹ ದೇಶಗಳ ಪತ್ರಿಕೆಗಳು ಸಮರ್ಥಕರು ಸಮಾಜವಾದ ಕುಸಿದಿದೆ ಎಂದು ಘೋಷಿಸುತ್ತಾರೆ!

ಇನ್ನೂ ಪರಮಾಣು ಯುದ್ಧದ ಅತೀ ಪ್ರಮುಖ ಪ್ರಶ್ನೆಯ ಮೇಲೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಮತ್ತು ಅದರ ವಿಶೇಷ ಮಿತ್ರ ಬ್ರಿಟನ್ನಿನ ನಿಲುವೇನು? "ಪಾರಂಪರಿಕ ಶಸ್ತ್ರಗಳು ಯುರೋಪಿನಲ್ಲಿ ಯುದ್ಧಕ್ಕೆ ತಡೆಯೊಡ್ಡುವುದಿಲ್ಲ. ಆದರೆ ಕಳೆದ ನಲ್ವತ್ತು ವರ್ಷಗಳಲ್ಲಿ ಪರಮಾಣು ಶಸ್ತ್ರಗಳು ಅದನ್ನು ಮಾಡಿವೆ" ಎಂದರು ಬ್ರಿಟಿಷ್ ಪ್ರಧಾನಮಂತ್ರಿ ಮಾರ್ಗರೆಟ್ ಥ್ಯಾಚರ್ ಇತ್ತೀಚಿನ ಗೋರ್ಬಚೆವ್ ಬ್ರಿಟನ್ ಭೇಟಿ ಸಮಯದಲ್ಲಿ. ಅಂದರೆ ಈಗಲೂ ಪರಮಾಣು ಪಡೆ, ಪರಮಾಣು ಪ್ರಾಬಲ್ಯ ಇವೇ ಸಾಮ್ರಾಜ್ಯಶಾಹಿಗಳ ಸೂತ್ರವಾಕ್ಯ.

ಮೇಲೆ ನಿಂತ ಸಮಾಜವಾದೀ ಸಮಾಜದ ಹಿರಿಮೆ ಕಂಡು ಬರುತ್ತದೆ. ಅವುಗಳ ವಿದೇಶಾಂಗ ಧೋರಣೆ ಬೇರೆ ದೇಶಗಳ ಮೇಲೆ ಆಕ್ರಮಣದ ಮೇಲೆ ನಿಲ್ಲಲು ಸಾಧ್ಯವಿಲ್ಲ, ಬದಲಾಗಿ ಸ್ವಾಧೀನತೆಗೆ ಬೆಂಬಲವೇ ಅದರ ಮೂಲವಾಗಿರಬೇಕಾಗುತ್ತದೆ.

ಜಾಗತಿಕ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಈ ಎರಡು ವ್ಯವಸ್ಥೆಗಳ ನಡುವಿನ ವ್ಯತ್ಯಾಸವನ್ನು ಕಳೆದ ವರ್ಷ ತಿರುವನಂತಪುರದಲ್ಲಿ ನಡೆದ ಸಿ.ಪಿ.ಐ.(ಎಂ)ನ 13ನೆಯ ಮಹಾಧಿವೇಶನ ಈ ರೀತಿ ವರ್ಣಿಸಿದೆ.

"ಪರಮಾಣು ಪ್ರಾಬಲ್ಯ ಸಾಧಿಸುವ ತನ್ನ ಆಕಾಂಕ್ಷೆ ತೊರೆಯಲು ಅಮೆರಿಕಾ ನಿರಾಕರಿಸುತ್ತಿದೆ. ವಾಸ್ತವದಲ್ಲಿ ಇದ್ದಕ್ಕಿದ್ದಂತೆ ಆಕ್ರಮಣ ನಡೆಸುವ ಯೋಜನೆಯಾದ ತಾರಾಯುದ್ಧ ಯೋಜನೆಯನ್ನು ಬಿಡಲು ಅದು ನಿರಾಕರಿಸುತ್ತದೆ....ಇಷ್ಟೇ ಅಲ್ಲ ವಿಶ್ವದ ಪ್ರತಿಯೊಂದು ಮೂಲೆಯಲ್ಲೂ ಸಮಾಜವಾದೀ ಗೆಳೆತನದಿಂದಿರುವ ಪ್ರಜಾಪ್ರಭುತ್ವವಾದಿ, ಸಮಾಜವಾದಿ ಶಕ್ತಿಗಳನ್ನು ಅದು ವಿರೋಧಿಸುತ್ತಿದೆ. ಅಲಿಪ್ತ ಆಂದೋಲನದ ಮೇಲೆ ನಿರಂತರ ಸುಯೋಜಿತ ಅಪಪ್ರಚಾರ, ಶಾಂತಿ ಮತ್ತು

ಸಮಾಜವನ್ನು ಕಟ್ಟಲು ಸಾಧ್ಯವೆಂಬ ಅದರ ನಂಬಿಕೆಯಿಟ್ಟು ಅಲುಗಾಡಿಸುವಲ್ಲಿ ಸಫಲರಾಗುವುದಿಲ್ಲ. ನಿರುದ್ಯೋಗ, ಬಡತನ, ಆಕ್ರಮಣ, ವಿಶ್ವಪ್ರಾಬಲ್ಯ ಸಾಮ್ರಾಜ್ಯಶಾಹೀ ಬಂಡವಾಳಶಾಹೀ ವ್ಯವಸ್ಥೆಯಲ್ಲಿಯೇ ಅಡಕವಾಗಿದೆಯಷ್ಟೇ ಅಲ್ಲ, ಯುದ್ಧ ಮತ್ತು ಮಿಲಿಟರಿ ಶಾಹಿ ಕೂಡಾ ಅದರ ಅವಿಭಾಜ್ಯ ಅಂಗ ಎಂದು ಆ ವ್ಯವಸ್ಥೆ ತೋರಿಸಿಕೊಟ್ಟಿದೆ. ಈಗ ಪರಮಾಣು ಪ್ರಾಬಲ್ಯ ಮತ್ತು ಪರಮಾಣು ಆಕ್ರಮಣದ ಪ್ರಯತ್ನವೂ ನಡೆದಿದೆ. ಇಂತಹದೊಂದು ಬರ್ಬರ ವ್ಯವಸ್ಥೆ ಅಸ್ತಿತ್ವದಲ್ಲಿರಲು ಬಿಡಲಾಗದು. ಸಮಾಜವಾದೀ ವ್ಯವಸ್ಥೆಯ ತಾತ್ಕಾಲಿಕ ತೊಂದರೆಗಳೇನೇ ಇರಲಿ ಬಂಡವಾಳ ಪದ್ಧತಿಗೆ ದೆಸೆಯಿಲ್ಲ. ಬಂಡವಾಳಶಾಹಿ ಒಂದು ಹಳಸಲಾದ ಬರ್ಬರ ವ್ಯವಸ್ಥೆ ಎಂದು ಇತಿಹಾಸ ಈಗಾಗಲೇ ತೀರ್ಪು ಘೋಷಿಸಿದೆ. ಇಂದು ಅದನ್ನು ಸಮರ್ಥಿಸಲು ತವಕಪಡುವವರು ಅದನ್ನು ಎತ್ತಿ ನಿಲ್ಲಿಸಲು ಪ್ರಯತ್ನಿಸುತ್ತಿರುವಾಗ ಇತಿಹಾಸದ ಈ ಘೋಷಿತ ತೀರ್ಪನ್ನು ದೇಶಾದ್ಯಂತ ಕಾರ್ಮಿಕ ವರ್ಗ ಪುನರುಚ್ಚರಿಸಬೇಕು.

ಸಾಮ್ರಾಜ್ಯಶಾಹಿಗಳು ಮತ್ತು ಅವರನ್ನು ಸಮರ್ಥಿಸಲು ತವಕಿಸುವವರು ಸಮಾಜವಾದದಲ್ಲಿ ಭಾರತದ ಕಾರ್ಮಿಕ ವರ್ಗದ ನಂಬಿಕೆಯನ್ನು, ಸದ್ಯದ ಬಂಡವಾಳಶಾಹೀ ವ್ಯವಸ್ಥೆಯನ್ನು ಅಂತ್ಯಗೊಳಿಸುವ ಅದರ ದೃಢ ನಿರ್ಧಾರವನ್ನು, ಸಮಾನತೆಯ ಹಕ್ಕಿನ ಆಧಾರದ ಮೇಲೆ ಹೊಸದೊಂದು ಸಮಾಜ ಕಟಬೇಕೆಂಬ ಅದರ ದೃಢ ನಿರ್ಧಾರವನ್ನು ಅಲುಗಾಡಿಸಲು ಸಾಧ್ಯವಿಲ್ಲ.

ಆ ವ್ಯವಸ್ಥೆಯ ಅಮಾನವೀಯ ಬರ್ಬರತೆಯನ್ನು ತೋರುವ ಸೂತ್ರವಾಕ್ಯವಿದು. ಈ ವಿನಾಶಕಾರೀ ಯುದ್ಧ ತಡೆಯಬೇಕೆಂದು ಇಡೀ ಜಗತ್ತೇ ಕಾತುರವಾಗಿದೆ. ಆದರೆ ಭವಿಷ್ಯದ ವಿಶ್ವ ಪ್ರಭುಗಳಿಗೆ ಆ ಕಾತುರ ಇಲ್ಲ. ಅವರು ಕಳ್ಳತನದಿಂದ ಪರಮಾಣು ವಿಜಯ ಸಾಧಿಸಲು ಸಿದ್ಧತೆ ನಡೆಸುತ್ತಿದ್ದಾರೆ. ಸೋವಿಯತ್ ಒಕ್ಕೂಟ ಮತ್ತು ಅದರ ಮುಖಂಡರು ವಿಶ್ವವನ್ನು ಪರಮಾಣು ಯುದ್ಧದ ಅಪಾಯದಿಂದ ಉಳಿಸಲು ಸ್ವಷ್ಟ ಪ್ರಸ್ತಾಪಗಳನ್ನಿಟ್ಟಿದ್ದಾರೆ; ಪಾರಂಪರಿಕ ಶಸ್ತ್ರಗಳ ಕಡಿತದ ಮೂರ್ತ ಪ್ರಸ್ತಾಪಗಳನ್ನಿಟ್ಟಿದ್ದಾರೆ; ತಮ್ಮ ಸಶಸ್ತ್ರ ಪಡೆಗಳ, ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಂಡಿದ್ದಾರೆ. ಆದರೆ ಅಮೆರಿಕನ್ ಸಾಮ್ರಾಜ್ಯಶಾಹಿಗಳು ತಾರಾ ಯುದ್ಧ ಯೋಜನೆಗೆ ಇನ್ನಷ್ಟು ಬಲ ನೀಡುತ್ತಿದ್ದಾರೆ. ತಮ್ಮ ಶಸ್ತ್ರಾಸ್ತ್ರಗಳ ವಿನಾಶಕಾರೀ ಸಾಮರ್ಥ್ಯವನ್ನು ಹೆಚ್ಚಿಸಲು ಯತ್ನಿಸುತ್ತಿದ್ದಾರೆ. ಯುರೋಪಿನಲ್ಲಿ ಸಮೀಪ ಮತ್ತು ಮಧ್ಯಮ ಶ್ರೇಣಿಯ ಕ್ಷಿಪಣಿಗಳನ್ನು ಕಡಿತಗೊಳಿಸಲು ಅವರು ಒಪ್ಪಿದರು. ಇದು ಶಾಂತಿಗೊಂದು ದೊಡ್ಡ ವಿಜಯ ಎಂದು ಸ್ವಾಗತಿಸಲಾಯಿತು. ಆದರೆ ಈ ಹಿಂಜರಿತ ಒಪ್ಪಿಕೊಳ್ಳಲು ಸಾಮ್ರಾಜ್ಯಶಾಹಿಗಳು ಸಿದ್ಧರಿರಲಿಲ್ಲ. ಈಗ ಅವರು ಸಂಖ್ಯೆಯಲ್ಲಿನ ಕಡಿತವನ್ನು ತುಂಬಿಕೊಳ್ಳಲು ಮಧ್ಯಮ ಶ್ರೇಣಿಯ ಕ್ಷಿಪಣಿಗಳ ವಿನಾಶ ಸಾಮರ್ಥ್ಯ ಹೆಚ್ಚಿಸುತ್ತಿದ್ದಾರೆ, ಶಸ್ತ್ರಾಸ್ತ್ರಗಳನ್ನು ಆಧುನೀಕರಿಸುತ್ತಿದ್ದಾರೆ. ಕಾರಣವಿಷ್ಟೆ, ಮಿಲಿಟರಿಶಾಹಿಯಿಲ್ಲದೆ, ಯುದ್ಧ ಶಸ್ತ್ರಗಳಿಗೆ ಭಾರೀ ಹಣ ಸುರಿಯದೆ ಸಾಮ್ರಾಜ್ಯಶಾಹಿಯ ಅಸ್ತಿತ್ವವೇ ಸಾಗದು. ಅಲ್ಲದೆ ದುರ್ಬಲ ದೇಶಗಳ ಮೇಲೆ ಸವಾರಿ ಮಾಡಲು, ಅವನ್ನು ಬೆದರಿಸಲು ಕೂಡಾ ಇದು ಅಗತ್ಯ. ಸಾಮ್ರಾಜ್ಯಶಾಹಿಯ, ಬಂಡವಾಳಶಾಹೀ ಸಮಾಜದ ಸ್ವಭಾವ.

ಇಲ್ಲಿ, ಕೂಡಾ ಮನುಷ್ಯನಿಂದ ಮನುಷ್ಯನ ಶೋಷಣೆಯ ನಿರ್ಮೂಲನದ

ಸಮಾಜವಾದೀ ಬಣದತ್ತ ಸಮತೋಲನವನ್ನು ವಾಲಿಸುವ ಭಾರತದಂತಹ ದೇಶಗಳ ಅಲಿಪ್ತತೆಯ ಮೇಲೆ ಒತ್ತಡ, ಮೂರನೇ ಜಗತ್ತಿನಲ್ಲಿ ಪ್ರಜಾಪ್ರಭುತ್ವ-ವಿರೋಧಿ, ಸಮಾಜವಾದ-ವಿರೋಧಿ ಸರ್ವಾಧಿಕಾರಗಳನ್ನು ಎತ್ತಿಕಟ್ಟುವುದು-ಇವೆಲ್ಲಾ ಸಮಾಜವಾದಿ ಬಣದ ವಿರುದ್ಧ ಅದರ ಹೋರಾಟದ ಒಂದು ಭಾಗವಲ್ಲದೆ ಬೇರೇನೂ ಅಲ್ಲ.... ಸಾಮ್ರಾಜ್ಯಶಾಹಿಗಳು ಸಾರ್ವಜನಿಕ ಕಾತುರ, ನೈತಿಕ ಪರಿಗಣನೆ ಅಥವಾ ಮಾನವೀಯ ಮೌಲ್ಯಗಳ ಬಗ್ಗೆ ಆತಂಕದಿಂದ ಸುಲಭವಾಗಿ ವಿಚಲಿತರಾಗುವುದಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಅವರ ಪ್ರತಿಯೊಂದು ಲೆಕ್ಕಾಚಾರವೂ ಭೌತಿಕ ಪ್ರಯೋಜನ ಮತ್ತು ವರ್ಗ ಪ್ರಯೋಜನದ ಮೇಲಷ್ಟೇ ನಿಂತಿದೆ. ಇಂದು ಪರಮಾಣು ಯುದ್ಧದ ವಿರುದ್ಧ ಸಮರ ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಒಂದು ಪ್ರಮುಖ ಅಂತರ್ರಾಷ್ಟ್ರೀಯ ಆಸಕ್ತಿಯಾಗಿದೆ... ಈ ಎರಡೂ ಸಾಮಾಜಿಕ ವ್ಯವಸ್ಥೆಗಳ ನಡುವಿನ ಗುಣಾತ್ಮಕ ವ್ಯತ್ಯಾಸ ಈಗ ಹೆಚ್ಚೆಚ್ಚಾಗಿ ಪರಮಾಣು ಶಸ್ತ್ರಾಸ್ತ್ರಗಳ ನಿರ್ಮೂಲನ, ಯುದ್ಧದ ನಿರ್ಮೂಲನದ ಸುತ್ತ ಕೇಂದ್ರಿತವಾಗುತ್ತಿದೆ. ಶಾಂತಿ ಮಾತುಕತೆಗಳಿಗಾಗಿ ಸೋವಿಯತ್ ಪಟ್ಟು, ಸತತವಾಗಿ ಅದು ಹೊಸ-ಹೊಸ ಪ್ರಸ್ತಾಪಗಳನ್ನು ಇಡುತ್ತಿರುವುದು 'ಇನ್ನೊಂದು ಪಕ್ಷ ರಕ್ಷಣಾತ್ಮಕ ನಿಲುವು ತಳೆಯುವಂತೆ ಮಾಡಿದೆ. ಅದರ ಧೋರಣೆಯನ್ನು ಬಯಲಿಗೆಳೆದಿದೆ".

ಸಾಮ್ರಾಜ್ಯಶಾಹಿಗಳು ಮತ್ತು ಅವರನ್ನು ಸಮರ್ಥಿಸಲು ತವಕಿಸುವವರು ಸಮಾಜವಾದದಲ್ಲಿ ಭಾರತದ ಕಾರ್ಮಿಕ ವರ್ಗದ ನಂಬಿಕೆಯನ್ನು, ಸದ್ಯದ ಬಂಡವಾಳ ಶಾಹೀ ವ್ಯವಸ್ಥೆಯನ್ನು ಅಂತ್ಯಗೊಳಿಸುವ ಅದರ ದೃಢ ನಿರ್ಧಾರವನ್ನು, ಉತ್ಪಾದನಾ ಸಾಧನಗಳಲ್ಲಿ ಸಮಾನತೆಯಲ್ಲಿ ಮೂರ್ತಗೊಳಿಸುವ ಮೂಲಭೂತ ಸಮಾನತೆಯ ಹಕ್ಕಿನ ಆಧಾರದ ಮೇಲೆ ಅಂದರೆ ಎಲ್ಲಾ ಉತ್ಪಾದನಾ ಸಾಧನಗಳ ಸಾಮಾಜೀಕರಣದ ಮೇಲೆ ಹೊಸದೊಂದು



ಮೇ ದಿನ ಮತ್ತು ಯುದ್ಧವಿರೋಧ

"ಫ್ಯಾಸಿಸಂ ಎಂದರೆ ಯುದ್ಧ"-ಈ ಘೋಷಣೆಯಡಿ ಲಂಡನ್‌ನಲ್ಲಿ ಮೇದಿನದ ಪ್ರದರ್ಶನ ,1934.

ವಿರುದ್ಧ ಹೋರಾಟದ ನಿಕಟ ಸಂಬಂಧವನ್ನು ವಿವರಿಸಿದ್ದವು. 1900 ರಲ್ಲಿ ಪ್ಯಾರಿಸಿನಲ್ಲಿ ನಡೆದ ಮಹಾಧಿವೇಶನ ಇದನ್ನು ಮತ್ತಷ್ಟು ಒತ್ತಿಹೇಳಿತು. ಯುರೋಪಿನ ಹಲವೆಡೆ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಕಾರ್ಮಿಕ ವರ್ಗದ ಐಕ್ಯತೆ ಕಟ್ಟುವಲ್ಲಿ ಮೇ ದಿನಗಳು ಪ್ರಮುಖ ಪಾತ್ರ ವಹಿಸಿದವು.



1920 ರ ದಶಕದ ಆರಂಭದಲ್ಲಿ ಚೀನ ಮತ್ತು ಉತ್ತರ ಆಫ್ರಿಕಾದಲ್ಲಿ ಮೇದಿನಾಚರಣೆ ಆರಂಭಗೊಂಡಿತು. ಮೇದಿನದ ಇತಿಹಾಸದಲ್ಲಿ ಇದೊಂದು ಮಹತ್ವದ ಬೆಳವಣಿಗೆಯಾಗಿತ್ತು. ಪಕ್ಕದ ಚಿತ್ರ 1935 ರಲ್ಲಿ ಟೋಕಿಯೋದಲ್ಲಿ ನಡೆದ ಮೇದಿನಾಚರಣೆ ಸಂದರ್ಭದ್ದು.



ವಿಶ್ವದಲ್ಲೂ.....

ಕೆಳಗಿನ ಚಿತ್ರ ಮೇ 1975 ರಂದು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಮತ್ತು ಅವರ ಸೈಗಾನ್ ಕೈಗೊಂಬೆಗಳ ವಿರುದ್ಧ ತಮ್ಮ ವಿಜಯವನ್ನು ವಿಯೆತ್ನಾಮೀ ಕಾರ್ಮಿಕರು, ಜನತೆ ಆಚರಿಸುತ್ತಿದ್ದಾರೆ.

ಮೇ ದಿನ 1989

ಪುಟ II ರಿಂದ

ಚುನಾವಣಾ ಸಮರ ರಾಜೀವ್ ಸರ್ಕಾರದ ದೇಶವಿರೋಧಿ ಧೋರಣೆಗಳನ್ನುತಿರಸ್ಕರಿಸಲು ಅವಕಾಶನೀಡುತ್ತದೆ. ಇದರಲ್ಲಿ ವಿಜಯ ಎಂದರೆ ಭಾರತೀಯಪ್ರಜಾಪ್ರಭುತ್ವಕ್ಕೆ ರಾಷ್ಟ್ರೀಯಐಕ್ಯತೆಗೊಂದು ದೊಡ್ಡ ಮುನ್ನಡೆ.

ಚರಣೆಗಳನ್ನು ಬೆಂಬಲಿಸಬೇಕೆಂದು ಕಾರ್ಮಿಕ ವರ್ಗಕ್ಕೆ ಸಿ.ಐ.ಟಿ.ಯು. ಕರೆ ನೀಡುತ್ತದೆ.

ಹಲವು ಜಾತ್ಯತೀತ ವಿರೋಧ ಪಕ್ಷಗಳು ಪರಸ್ಪರ ಸಮೀಪ ಬಂದು ರಾಜೀವ್ ಆಳ್ವಿಕೆಯನ್ನು ವಿರೋಧಿಸುವಲ್ಲಿ ಎಡಶಕ್ತಿಗಳೊಂದಿಗೆ ಸಹಕರಿಸುತ್ತಿವೆ ಎಂಬ ಸಂಗತಿಯನ್ನು ಕಾರ್ಮಿಕ ವರ್ಗ ಮತ್ತು ಸಿ.ಐ.ಟಿ.ಯು. ತೃಪ್ತಿಯಿಂದ ಗಮನಿಸಿದೆ. ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ)ನ್ನು ಅಧಿಕಾರದಿಂದ ಇಳಿಸುವ ಕೋಮು ಮತ್ತು ವಿದ್ವಂಸಕಾರಿ ಶಕ್ತಿಗಳಿಗೆ ತಕ್ಕ ಪ್ರತ್ಯುತ್ತರ ನೀಡುವ ಉದ್ದೇಶದಿಂದ ದುಡಿಯಬೇಕು. ಕಾಂಗ್ರೆಸ್ (ಐ)ನ ವಿರುದ್ಧ ಹೋರಾಟದ ಹೆಸರಿನಲ್ಲಿ ಕೋಮುವಾದಿ ಮತ್ತು ವಿಭಜನಕಾರಿ ಶಕ್ತಿಗಳೊಂದಿಗೆ ಮಿತ್ರತ್ವವಿದ್ದರೆ ಆಳುವ ಪಕ್ಷದ ತಂತ್ರಗಳಿಗೆ ಬಲಿಯಾದಂತೆಯೇ ಸರಿ.

ಕಾರ್ಮಿಕ ವರ್ಗ ಸಿದ್ಧಗೊಳ್ಳಲಿ ಎಂದು ಸಿ.ಐ.ಟಿ.ಯು. ಕರೆ ನೀಡುತ್ತದೆ. ಏಕೆಂದರೆ ಚುನಾವಣಾ ಸಮರ ರಾಜೀವ ಸರ್ಕಾರವನ್ನು ಸೋಲಿಸಲು, ಅದರ ದೇಶ-ವಿರೋಧಿ ಧೋರಣೆಗಳನ್ನು ತಿರಸ್ಕರಿಸಲು ಅವಕಾಶ ಕಲ್ಪಿಸುತ್ತದೆ. ಕಾಂಗ್ರೆಸ್ (ಐ)ನ್ನು ಸೋಲಿಸಲು, ಕೋಮುವಾದಿ ವಿಚ್ಛಿದ್ರಕಾರಿ ಶಕ್ತಿಗಳನ್ನು ಜನರಿಂದ ದೂರತಳ್ಳಲು ದೃಢ ನಿರ್ಧಾರ ಮಾಡಿರುವ ಸಮಸ್ತ ಕಾರ್ಮಿಕವರ್ಗ, ಅದರ ಎಲ್ಲ ಸಂಘಟಿತ ಯೂನಿಯನ್‌ಗಳು ಎಡ ಮತ್ತು ಜಾತ್ಯಾತೀತ ಶಕ್ತಿಗಳ ಬೆಂಬಲಕ್ಕೆ ತಮ್ಮ ಸಮಸ್ತ ಶಕ್ತಿಯನ್ನು ಕ್ರೋಢೀಕರಿಸಬೇಕು. ಇದರಲ್ಲಿ ವಿಜಯವೆಂದರೆ ಭಾರತೀಯ ಪ್ರಜಾಪ್ರಭುತ್ವಕ್ಕೆ ರಾಷ್ಟ್ರದ ಐಕ್ಯತೆಗೆ ಒಂದು ದೊಡ್ಡ ಮುನ್ನಡೆ.

ಕೊನೆಯದಾಗಿ, ನಿರುದ್ಯೋಗ, ದಾರಿದ್ರ್ಯಗಳ ಶಾಪದಿಂದ ವಿಮೋಚನೆಗೊಳ್ಳಲು ಕಾರ್ಮಿಕ ವರ್ಗ ತನ್ನ ಬಲವನ್ನು ಸಾಕಷ್ಟು ಹೆಚ್ಚಿಸಿಕೊಂಡು ಈಗಿನ ಸಾಮಾಜಿಕ ವ್ಯವಸ್ಥೆಯನ್ನು, ಬಂಡವಾಳಶಾಹಿ ದಾರಿಯನ್ನು ಮತ್ತು ಬೂರ್ಜ್ವಾ-ಭೂಮಾಲಿಕ ಆಳ್ವಿಕೆಯನ್ನು ಸಂಪೂರ್ಣವಾಗಿ ಬದಲಿಸಬೇಕೆಂಬುದನ್ನು ಕಾರ್ಮಿಕ ವರ್ಗ ನೆನಪಿಸಿಕೊಳ್ಳಬೇಕೆಂದು ಸಿ.ಐ.ಟಿ.ಯು. ಕೇಳುತ್ತದೆ. ಇದನ್ನು ಬದಲಿಸದೆ ಶೋಷಣೆಯಿಂದ ಮುಕ್ತಿ ಸಮಾಜವಾದದ ಸ್ಥಾಪನೆ ಸಾಧ್ಯವಿಲ್ಲ. ಮೇದಿನದಂದು ರಾಜೀವ್ ಸರ್ಕಾರವನ್ನು ಇಳಿಸಲು, ಸದ್ಯದ ಆರ್ಥಿಕವ್ಯವಸ್ಥೆಯನ್ನು ಆಮೂಲಾಗ್ರವಾಗಿ ಸರಿಪಡಿಸಲು, ಸಮಾಜವಾದಕ್ಕಾಗಿ ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಿಸಲು ಎಲ್ಲರೂ ರಾಷ್ಟ್ರೀಯ ಐಕ್ಯತೆಯ ಬಾವುಟವನ್ನು ಎತ್ತಿ ಹಿಡಿಯಬೇಕು.

ಲ್ಯಾಟಿನ್ ಅಮೆರಿಕದ ಬಸಿರೊಳಗೆ ಕ್ರಾಂತಿಯ ಲಾವಾರಸ

ಕೆ ನಿಕರಾಗುವನ್ ಕ್ರಾಂತಿ ಸುಭದ್ರಗೊಳಿಸುತ್ತಿರುವುದು 'ಮತ್ತು ಲ್ಯಾಟಿನ್
ಗಳಲ್ಲಿ ಕ್ರಾಂತಿಕಾರಿ ಶಕ್ತಿಗಳ ಭಾರಿ ಮುನ್ನಡೆ ಇಂದು ಈ ಖಂಡದ
ದ ಅಂಶಗಳು ಈ ಖಂಡದಲ್ಲಿ ಸಾಮ್ರಾಜ್ಯಶಾಹಿ ಕುತಂತ್ರದ ವಿರುದ್ಧ
ದ್ದಾಗಿ ಉಚ್ಛ್ರಾಯಕ್ಕೆ ಒಯ್ದಿವೆ.
ಕ್ರಾಂತಿಕಾರಿ ಮುನ್ನಡೆಯ ಪ್ರಕ್ರಿಯೆಯಲ್ಲಿ ಗುರುತಿಸಬಹುದಾಗಿದೆ.
ಜತೆ ಹೆಚ್ಚೆಚ್ಚು ಐಕ್ಯತೆ ಸಾಧಿಸುತ್ತಿರುವುದು.
ಹಕ್ಕುಗಳಿಗಾಗಿ ನಡೆಯುತ್ತಿರುವ ಹೋರಾಟಗಳಿಂದಾಗಿ ಕಮ್ಯೂನಿಸ್ಟರಿಂದ
ಜನವಿಭಾಗಗಳ ಪ್ರತಿನಿಧಿಗಳು ಇರುವ "ವಿಶಾಲರಂಗ"ಗಳ ಉದಯ
ಸ್ಥಿತಿ. IMF ನ ಆರ್ಥಿಕ ಕ್ರಮಗಳ ಹೇರಿಕೆ, ಸಾಲದ ಬಿಕ್ಕಟ್ಟು ಮತ್ತು
ನೀತಿಗಳ ವಿರೋಧದ ಸುತ್ತ ಹೆಣೆದಿರುವ ಪ್ರಬಲ ಸಾಮ್ರಾಜ್ಯಶಾಹಿ-

ಸುಮಾರು 20 ವರ್ಷಗಳ ಕಾಲ ಪಶ್ಚಿಮ ಗೋಳಾರ್ಧದಲ್ಲಿ ಕ್ಯೂಬನ್ ಕ್ರಾಂತಿಯ ಏಕಾಂಗಿತನವನ್ನು 10 ವರ್ಷಗಳ ಕೆಳಗೆ ನಿಕರಾಗುವ ಕ್ರಾಂತಿ ಹೋಗಲಾಡಿಸಿತು. ಇಂದು ಈ ಎರಡು ಕ್ರಾಂತಿಗಳು ಇಡಿಯ ಲ್ಯಾಟಿನ್ ಅಮೆರಿಕಕ್ಕೆ ಸ್ಫೂರ್ತಿಯ ಚಿಲುಮೆಗಳಾಗಿವೆ. ಎಲ್ ಸಾಲ್ವಡೋರ್ ಸೇರಿದಂತೆ ಹಲವು ದೇಶಗಳು ಕ್ರಾಂತಿಯ ಹೊಸ್ತಿಲಲ್ಲಿವೆ. ಭಾರಿ ಮರುಪಾವತಿ ಮಾಡಲಾಗದ ಸಾಲದ ಹೊರೆ ಹಿಂದೆಂದೂ ಕಾಣದ ರೀತಿಯಲ್ಲಿ ಈ ಖಂಡದ ಎಲ್ಲಾ ದೇಶಗಳ ಜನತಾ ಹೋರಾಟಗಳನ್ನು, ಅವರ ಭವಿಷ್ಯಗಳನ್ನು ಜತೆಯಾಗಿ ಹೊಸೆದಿದೆ. ನಿನ್ನೆಯವರೆಗೆ ಸಾಮ್ರಾಜ್ಯಶಾಹಿ ಅಮೆರಿಕಾ ತನ್ನ ಹಿತ್ತಲು ಎಂದು ಪರಿಗಣಿಸಿದ್ದ ಲ್ಯಾಟಿನ್ ಅಮೇರಿಕಾ ಹಾಗೇನೇ ಉಳಿದಿಲ್ಲ. ಅಮೆರಿಕನ್ ಕೈಗೊಂಬೆ ಸರ್ವಾಧಿಕಾರಿಗಳು ಒಬ್ಬೊಬ್ಬರಾಗಿ ಮಣ್ಣುಮುಕ್ಕಿದ್ದಾರೆ. ಕ್ರಾಂತಿಯ ಲಾವಾರಸ ಯಾವಾಗಬೇಕಾದರೂ ಇಡೀ ಖಂಡ ನಡುಗುವಂತೆ ಸ್ಫೋಟಿಸಬಹುದು.

ಕಳೆದ ವರ್ಷ ಜುಲೈಯಲ್ಲಿ ಕ್ಯಾರಿಬಿಯನ್ ಮತ್ತು ಮಧ್ಯ ಅಮೇರಿಕದ ಪ್ರಗತಿಪರ ಮತ್ತು ಕ್ರಾಂತಿಕಾರಿ ಸಂಘಟನೆಗಳ ಪಕ್ಷಗಳ ಸಭೆಯೊಂದು ನಡೆಯಿತು. ಪ್ರಸಕ್ತ ಆರ್ಥಿಕ ಮತ್ತು ಸಾಮಾಜಿಕ ಬಿಕ್ಕಟ್ಟು ಭಾರಿ ಅತೃಪ್ತಿಗೆಡೆ ಕೊಡುತ್ತದೆ. ಈ ಅತೃಪ್ತಿಯನ್ನು ಕ್ರಾಂತಿಕಾರಿ ಶಕ್ತಿಗಳು ಪ್ರಜಾಪ್ರಭುತ್ವ ಗೆದ್ದುಕೊಡುವುದಕ್ಕೆ ಉಪಯೋಗಿಸಬೇಕು. ಪ್ರಜಾಪ್ರಭುತ್ವ ಜನತೆಯ ಸಾಮಾಜಿಕ ಮತ್ತು ಆರ್ಥಿಕ ಮುನ್ನಡೆಯಲ್ಲಿ, ಜನರ ಪಾಲ್ಗೊಳ್ಳುವಿಕೆಯ ಆಧಾರದ ಮೇಲಿರಬೇಕು ಅದು ಸಭೆಯ ನಿರ್ಣಯವಾಗಿತ್ತು.

ವಿಶಾಲರಂಗಗಳನ್ನು ಕಟ್ಟಲು ಕರೆಕೊಟ್ಟಿರುವ ನಿರ್ಣಯ "ವಿಶಾಲರಂಗ ವಿವಿಧ ಸಾಮಾಜಿಕ ವರ್ಗಗಳನ್ನೊಳಗೊಂಡಿರಬೇಕು....ವಿವಿಧ ಜನವಿಭಾಗಗಳನ್ನು, ವರ್ಗಗಳನ್ನು ಕಾಡುವ ವಿವಿಧ ಪ್ರಶ್ನೆಗಳಿಗೆ ಪ್ರತಿಸ್ಪಂದಿಸಬೇಕು. ಆದರೆ ಈ ವಿಶಾಲ ರಂಗ ಜಯಗಳಿಸಬೇಕಾದರೆ ಕಾರ್ಮಿಕ ವರ್ಗ ಇದರ ಮುಖ್ಯ ತಳಹದಿಯಾಗಿರಬೇಕು" ಎಂದಿದೆ. ವಿಶಾಲರಂಗವನ್ನು ಕಟ್ಟುವ, ಅದರ ಜತೆಗೆ ಕೆಲಸ ಮಾಡುವ ಹೊತ್ತಿಗೆ ಕ್ರಾಂತಿಕಾರಿ ಶಕ್ತಿಗಳು ಪ್ರತಿ ದೇಶಗಳಲ್ಲಿ ಹೊಂದಿರುವ ಸ್ವತಂತ್ರ ಅವಕಾಶವನ್ನು ಬಿಟ್ಟುಕೊಡಬಾರದು ಎಂದು ಎಚ್ಚರಿಸಿದೆ ನಿರ್ಣಯ.

ಲ್ಯಾಟಿನ್ ಅಮೆರಿಕಾದ ದುರ್ಭರ ಆರ್ಥಿಕ ಸ್ಥಿತಿ

1988ರ ಕೊನೆ ಹೊತ್ತಿಗೆ ಸಾಲದ ಹೊರೆ 41 ಸಾವಿರ ಕೋಟಿ ಡಾಲರುಗಳು.

★ ಒಟ್ಟು ಉತ್ಪಾದನೆಯ ಶೇಕಡಾ 4 ಮತ್ತು ಒಟ್ಟು ರಫ್ತಿನ ಕಾಲುಭಾಗ ಸಾಲ ಮರುಪಾವತಿಗೆ ಖರ್ಚು.

★ ಅಮೆರಿಕಾದಲ್ಲಿ ಬಡ್ಡಿದರ ಶೇಕಡಾ 1ರಷ್ಟು ಹೆಚ್ಚಿದರೂ ಸಾಲದ ಹೊರೆ 300 ಕೋಟಿ ಡಾಲರುಗಳಷ್ಟು ಹೆಚ್ಚಾಗುತ್ತದೆ.

★ ಒಟ್ಟು ತಲಾ ಉತ್ಪಾದನೆ ಕುಸಿದು 1978ರ ಮಟ್ಟಕ್ಕೆ ಮುಟ್ಟಿದೆ.

★ ಸರಾಸರಿ ಹಣದುಬ್ಬರ ಶೇಕಡಾ 470. ಪೆರುವಿನಲ್ಲಿ ಶೇಕಡಾ 1300 ಬ್ರೆಜಿಲ್‌ನಲ್ಲಿ ಶೇಕಡಾ 800.

ಕಳೆದ ವರ್ಷ ಆಗಸ್ಟ್‌ನಲ್ಲಿ 11 ಲ್ಯಾಟಿನ್ ಅಮೆರಿಕನ್ ದೇಶಗಳು ಮತ್ತು ಕ್ಯೂಬಾದ ಕಮ್ಯೂನಿಸ್ಟ್ ಪಕ್ಷಗಳು ಇನ್ನೊಂದು ಪ್ರಮುಖ ಬೆಳವಣಿಗೆಯಾಗಿ ಸಭೆ ಸೇರಿದ್ದವು. ಈ ಸಭೆ ಸಹ ಹೆಚ್ಚು ಕಡಿಮೆ ಮೇಲೆ ಹೇಳಿದ ತೀರ್ಮಾನಗಳಿಗೆ ಬಂದಿವೆ. ಈ ಎರಡು ಸಭೆಗಳ ನಂತರ ಕ್ರಾಂತಿಕಾರಿ ಮುನ್ನಡೆಗೆ ಹೊಸ ಹುರುಪು ಬಂದಿದೆ. ಆದರೆ ಅಮೆರಿಕಾ ಸುಮ್ಮನೆ ಕುಳಿತಿಲ್ಲ. ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಪ್ರಾಕೃತಿಕ ಮತ್ತು ಖನಿಜ ಸಂಪತ್ತನ್ನು ಹೊಂದಿರುವ ಲ್ಯಾಟಿನ್ ಅಮೆರಿಕಾ ಸಾಮ್ರಾಜ್ಯಶಾಹಿ ಮಸಲತ್ತುಗಳು, ಕುತಂತ್ರಗಳಿಗೊಳಗಾಗಿದೆ. ಸಾಮ್ರಾಜ್ಯಶಾಹಿ ಈ ಖಂಡದಲ್ಲಿ ರಾಜಕೀಯ ಮಧ್ಯಪ್ರವೇಶ ನಡೆಸುತ್ತಾ ಬಂದಿದೆ. ಈ ಮಧ್ಯಪ್ರವೇಶದ ಹೊಸರೂಪ ಸನ್ನಿವೇಶಕ್ಕೆ ಸರಿಯಾಗಿ ಬದಲಾಯಿಸುತ್ತಾ ಬಂದಿದೆ. ಕಳೆದ ನೂರು ವರ್ಷಗಳಲ್ಲಿ ಇಲ್ಲಿ ಸುಮಾರು ಐನೂರು ಸಫಲ ಮಿಲಿಟರಿ ಕ್ಷಿಪ್ರ ಕ್ರಾಂತಿಗಳು ನಡೆದಿವೆ. ಇದಕ್ಕಾಗಿ ಎಲ್ಲಾ ರೀತಿಯ ಕ್ರಮಗಳನ್ನು, ನೆಪಗಳನ್ನು ಬಳಸಲಾಗಿದೆ. ಇತ್ತೀಚಿನ ವಿಶಿಷ್ಟ ನೆಪ- ಯಾವುದೇ ದೇಶದ ಸರ್ಕಾರ ಮಾದಕ ವಸ್ತುಗಳ ಉತ್ಪಾದನೆ, ವಿತರಣೆ ತಡೆಯುವುದಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂಬುದು. ಇಂತಹ ಕ್ರಮಗಳಿಂದಾಗಿ ಇಡೀ ಖಂಡವೇ ಹೋರಾಟಗಳ, ಸಂಘರ್ಷಗಳ ರಕ್ತಸಿಕ್ತವಾಗಿದೆ. ಇಂತಹ ವಾತಾವರಣದಲ್ಲಿ ಐದು ಮಧ್ಯ ಅಮೆರಿಕ ದೇಶಗಳ ಶಾಂತಿ ಒಪ್ಪಂದ ಭಾರಿ ಮಹತ್ವದ್ದು.

ಇಂತಹ ಹಿಮ್ಮೆಟ್ಟುವಿಕೆ ಮತ್ತು ರೇಗನ್ ಆಡಳಿತದ ಬದಲಾವಣೆಯಿಂದಾಗಿ ಏನಾದರೂ ಪರಿಸ್ಥಿತಿ ಉತ್ತಮವಾಗಬಹುದೆ? ಇಲ್ಲ, ಬುಶ್ ಆಡಳಿತ ಹಿಂದಿನ ನೀತಿಗಳನ್ನೇ ಮುಂದುವರಿಸಿಕೊಂಡು ಹೋಗುತ್ತಿದೆ. ಇಂತಹ ನೀತಿಗಳನ್ನು "90ರ ದಶಕಕ್ಕೆ ಲ್ಯಾಟಿನ್ ಅಮೆರಿಕನ್ ಕಾರ್ಯ ವಿಧಾನ" ಎಂಬ ದಸ್ತಾವೇಜಿನಲ್ಲಿ ಕೊಡಲಾಗಿದೆ. ಇದರ ಸಾರ ಹಸ್ತಕ್ಷೇಪದ ಹೊರರೂಪ ಬದಲಾಯಿಸಿ ಮುಂದುವರಿಸುವುದೇ ಆಗಿದೆ.



ಕ್ಯೂಬಾದಲ್ಲಿ ಮೇ ದಿನ 1959

...ಡೋರ್

ಕನ್ ಕೈಗೊಂಬೆ ಸರ್ಕಾರದ ಸೈನ್ಯದ ಮುಖ್ಯ ನೆಲೆ ಹಾಡು ಹಗಲಲ್ಲೇ FMLN ದಾಳಿ ನಡೆಸಿತು. ಈ ದಾಳಿ ಮತ್ತು ನೆಲೆಯಲ್ಲಿ ಸಾಕಷ್ಟು ನಷ್ಟ ಉಂಟು ಮಾಡುವಲ್ಲಿ FMLN ಹೋರಾಟಗಾರರನ್ನು ನಗರದ ಜನತೆ ಸಹ ಸೇರಿಕೊಂಡಿತು. ಇದರ ಮೊದಲು ಸೆಪ್ಟೆಂಬರ್‌ನಿಂದ ನವೆಂಬರ್‌ನವರೆಗೆ ಸೈನ್ಯದ ಸಂಪರ್ಕ ಜಾಲಕ್ಕೆ ಗಮನಾರ್ಹ ಹಾನಿ ಮಾಡಿತ್ತು.

ಕೈಗೊಂಬೆ ಸರ್ಕಾರದ ಆಡಳಿತದ ಜಂಘಾಬಲ ಉಡುಗಿಸಲು FMLN ಎಲ್ಲಾ ನಗರಗಳ ಮೇಯರುಗಳಿಗೆ ರಾಜೀನಾಮೆ ಕೊಡಲು ಕರೆ ನೀಡಿತ್ತು. ಇದಕ್ಕೆ ಭಾರೀ ಯಶಸ್ಸು ದೊರಕಿತು. ಸುಮಾರು 35 ಮೇಯರುಗಳು ರಾಜೀನಾಮೆ ಕೊಟ್ಟರು. ದೇಶದ ಹೆಚ್ಚಿನ ಭಾಗಗಳಲ್ಲಿ ಸರ್ಕಾರಿ ಆಡಳಿತ ಯಂತ್ರ ಇಲ್ಲವೇ ಇಲ್ಲ ಎಂದು ನ್ಯೂಯಾರ್ಕ್ ಟೈಮ್ಸ್ (ಜನವರಿ 8) ಗಾಬರಿಯಿಂದ ವರದಿ ಮಾಡಿದೆ.

ಈ ನಡುವೆ ದೇಶದಲ್ಲಿ ಶಾಂತಿ ಸ್ಥಾಪಿಸಲು FMLN ಏಕಪಕ್ಷೀಯವಾಗಿ ಕದನ ವಿರಾಮ ಘೋಷಿಸಿತು. ಆದರೆ ಅದಕ್ಕೆ ದುರ್ತೆಯವರ ಉತ್ತರ ಸಾಲ್ವಡೋರ್ ಟ್ರೇಡ್ ಯೂನಿಯನ್‌ಗಳ ಕೇಂದ್ರೀಯ ಕಛೇರಿ ಮತ್ತು FMLN ನಡೆಸುವ ಆಸ್ಪತ್ರೆಗಳ ಮೇಲೆ ಬಾಂಬ್ ದಾಳಿ. ಇದರಿಂದ ಕದನವಿರಾಮವನ್ನು ಹಿಂತೆಗೆದುಕೊಳ್ಳಬೇಕಾಗಿ ಬಂದು ಸೈನ್ಯದ ನೆಲೆಗಳ ಮೇಲೆ ದಾಳಿ ನಡೆಸಿ ಕದನದಲ್ಲಿ ನೂರಾರು ಸೈನಿಕರು ಹತರಾದರು. ದೇಶದ 80 ಶೇಕಡಾ ಪ್ರದೇಶದಲ್ಲಿ ವಿದ್ಯುತ್‌ಶಕ್ತಿ ಜಾಲ ಅಸ್ತವ್ಯಸ್ತವಾಯಿತು.

ಮಾರ್ಚ್ 19ರಂದು ಎಲ್‌ಸಾಲ್ವಡೋರ್‌ನಲ್ಲಿ ಚುನಾವಣೆ ನಡೆಯುವುದೆಂದು ಘೋಷಿಸಲಾಯಿತು. FMLN ರಾಜಕೀಯ ಪ್ರಚಾರಕ್ಕೆ ಸಮಯ ಒದಗಿಸಲು ಚುನಾವಣೆಗಳನ್ನು ಮುಂದೆ ಹಾಕಬೇಕೆಂದು ಒತ್ತಾಯಿಸಿತು. ಇದನ್ನು ಸರ್ಕಾರ ನಿರಾಕರಿಸಿದಾಗ FMLN ತನ್ನ ಘೋಷಣೆಗಳೊಂದಿಗೆ ಚುನಾವಣೆಗೆ ಧುಮುಕಿ ಅದರ ಪರವಾಗಿ ದೇಶಾದ್ಯಂತ ಭಾರೀ ಪ್ರದರ್ಶನಗಳನ್ನು ಸಂಘಟಿಸಿತು. ಸೈನ್ಯದ ಸಂಖ್ಯೆ 60,000ದಿಂದ 12,000ಕ್ಕೆ ಇಳಿಸುವುದು, ಕುಪ್ರಸಿದ್ಧ ಚಿತ್ರಹಿಂಸೆ ಮತ್ತು ದಮನ ಕೈಗೊಳ್ಳುವ ಪೋಲಿಸು ಮತ್ತು ಗುಪ್ತ ಸೈನ್ಯ ಪಡೆಯನ್ನು ವಿಸರ್ಜಿಸುವುದು. ಇಂತಹ ರಾಜಕೀಯ ದಮನದಲ್ಲಿ ಪಾಲ್ಗೊಂಡವರಿಗೆ ಕಠಿಣ ಶಿಕ್ಷೆ, ಕಾರ್ಮಿಕ, ಕಾನೂನುಗಳಲ್ಲಿ ಸುಧಾರಣೆ, ಚುನಾವಣೆ ನಿರೀಕ್ಷಣೆಗೆ ಅಂತರ್ರಾಷ್ಟ್ರೀಯ ಮಂಡಳಿ ರಚನೆ- ಇವೇ ಮುಖ್ಯ ಒತ್ತಾಯಗಳಾಗಿದ್ದವು. ಇದಕ್ಕೆ ಜನತೆಯಿಂದ ಸಿಕ್ಕ ಪ್ರತಿಕ್ರಿಯೆಯಿಂದ ಭೀತವಾದ ದುರ್ತೆ ಸರ್ಕಾರ ಈಗ ಚುನಾವಣೆ ಮುಂದುವರಿಸಲು ತಯಾರಾಯಿತು. ಈ ರೀತಿ ಸರ್ಕಾರದ ವಿರುದ್ಧ ಜನತೆಯ ಕೋಪ ಕಂಡು ಭಯಭೀತರಾದ ಅಮೆರಿಕನ್ ರಾಯಭಾರ ಸಿಬ್ಬಂದಿ ತನ್ನ ಬೆಂಬಲವನ್ನು ಬಲಪಂಥೀಯ AREN ಗೆ ಬದಲಾಯಿಸಿತು. ಅಲ್ಲದೆ ARENನ ಯಮ ಕಿಂಕರರೆಂದು ಪ್ರಸಿದ್ಧರಾದ ಕಮ್ಯೂನಿಸ್ಟ್ ವಿರೋಧಿ ಭಯೋತ್ಪಾದಕರಿಂದ FMLN ಮತ್ತು ಇತರ ಎಡಶಕ್ತಿಗಳ ಮೇಲೆ ದಾಳಿ, ದಮನ ಆರಂಭಿಸಿತು. ಇಂತಹ ಸಂದರ್ಭದಲ್ಲಿ FMLN ಚುನಾವಣೆಯನ್ನು ಬಹಿಷ್ಕರಿಸಿತು. ಆನಂತರ ನಡೆದ ಚುನಾವಣೆಯ ನಾಟಕದ ಹಿಂಸಾಕಾಂಡದ ನಡುವೆ AREN ಗೆದ್ದಿತು. ಆದರೆ FMLNನ ಮಿಲಿಟರಿ, ರಾಜಕೀಯ ಹೋರಾಟ ಮುಂದುವರೆದಿದೆ.

ಇತರ ದೇಶಗಳಲ್ಲಿ

ಗ್ವಾಟೆಮಾಲಾದಲ್ಲಿ ಮೂರು ಪ್ರಮುಖ ಮಾರ್ಕ್ಸ್‌ವಾದಿ ಸಂಘಟನೆಗಳು ತಮ್ಮ ಮಿಲಿಟರಿ, ಸಂಘಟನಾತ್ಮಕ ಮತ್ತು



ಸೈದ್ಧಾಂತಿಕ ಕೆಲಸಗಳಲ್ಲಿ ಸಮನ್ವಯ ಸಾಧಿಸಲಾರಂಭಿಸಿದ್ದಾರೆ. ಆ ಮೂಲಕ ಒಂದು ಪಕ್ಷವಾಗಿ ಒಗ್ಗೂಡುವತ್ತ ನಡೆಯುತ್ತಿದ್ದಾರೆ. ಗ್ವಾಟೆಮಾಲಾದ ಪ್ರಸಕ್ತ ಹಂತದ ಹೋರಾಟ ಸಾಮ್ರಾಜ್ಯಶಾಹಿ-ವಿರೋಧಿ ಜನತಾ ಕ್ರಾಂತಿಕಾರಿ ಸಶಸ್ತ್ರ ಹೋರಾಟ ಎಂದು ಗುರುತಿಸಿವೆ.

ಪನಾಮಾ

1977ರಲ್ಲಿ ಆದ ಟೊರ್ರಿಜೋಸ್ ಒಪ್ಪಂದದ ಜಾರಿ ಬಗ್ಗೆ ಮತ್ತು ಪನಾಮಾದ ಆಂತರಿಕ ವಿಷಯಗಳಲ್ಲಿ ಅಮೆರಿಕನ್ ಹಸ್ತಕ್ಷೇಪ ಕಡಿಮೆ ಮಾಡುವುದು ಪ್ರಮುಖ ರಾಜಕೀಯ ಪ್ರಶ್ನೆಯಾಗಿದೆ. ಮೇ 7ರಂದು ಪಾರ್ಲಿಮೆಂಟರಿ ಮತ್ತು ಅಧ್ಯಕ್ಷೀಯ ಚುನಾವಣೆಗಳು ನಡೆಯಲಿವೆ. ಆದರ ಹಿನ್ನೆಲೆಯಲ್ಲಿ ಈ ರಾಜಕೀಯ ಪ್ರಶ್ನೆಗೆ ವಿಶೇಷ ಪ್ರಾಮುಖ್ಯತೆ ಬಂದಿದೆ.

ಪನಾಮಾ ಕಾಲುವೆ ಸಾರ್ವಭೌಮತೆ ಎತ್ತಿ ಹಿಡಿಯುವುದು, ಮೇಲೆ 2000 ಇಸವಿ ಹೊತ್ತಿಗೆ ಸಂಪೂರ್ಣ ಹತೋಟಿ ಮತ್ತು ಅಮೆರಿಕನ್ ಸೇನಾ ನೆಲೆಗಳನ್ನು ಹಿಂತೆಗೆಯುವುದು ಮುಖ್ಯ ಘೋಷಣೆಗಳಾಗಿವೆ. ಈ ಪ್ರಮುಖ ಘೋಷಣೆಗಳನ್ನು ಸಾಧಿಸಲು 7ಪಕ್ಷಗಳ ರಾಷ್ಟ್ರೀಯ ವಿಮೋಚನಾ ಒಕ್ಕೂಟಗಳನ್ನು ರಚಿಸಿಕೊಂಡಿವೆ. ಇದರಲ್ಲಿ ಈಗಿನ ಆಳುವ ಪಕ್ಷ RDP ಮತ್ತು ಪನಾಮಾದ ಕಮ್ಯೂನಿಸ್ಟ್ ಪಕ್ಷ- PPP ಸೇರಿವೆ. ಸೋವಿಯತ್ ಯೂನಿಯನ್ ಸೇರಿದಂತೆ ಇತರೆ ದೇಶಗಳೊಂದಿಗೆ ಆರ್ಥಿಕ ಸಹಕಾರದ ಪರವಾಗಿದೆ ಈ ಒಕ್ಕೂಟ. ವಸಾಹತುಶಾಹಿ ವಿರೋಧಿ ರಾಷ್ಟ್ರೀಯ ಹೋರಾಟ ಈಗಿನ ಹೋರಾಟದ ಹಂತ ಎಂದು PPP ಅಭ್ಯೈಸಿದೆ. ಪನಾಮಾ ಕಾಲುವೆ ಮೇಲೆ ರಾಷ್ಟ್ರೀಯ ಸಾರ್ವಭೌಮತ್ವದ ಬಗ್ಗೆ ಪ್ರಬಲ ಜನಾಭಿಪ್ರಾಯ ತಿಳಿದಿರುವ ಅಮೆರಿಕನ್ ನೀತಿ ನಿರ್ಮಾಪಕರು, ಈಗ ಸೇನಾ-ನೆಲೆಯನ್ನು (ಜಗತ್ತಿನಾದ್ಯಂತ ಪ್ರಮುಖ ಏಳು ನೆಲೆಗಳಲ್ಲೊಂದು) ಉಳಿಸಿಕೊಳ್ಳುವತ್ತ ಗಮನ ಹರಿಸಿದ್ದಾರೆ. ಕುತಂತ್ರ ನಡೆಸಿದ್ದಾರೆ. ಇದನ್ನು ಸೋಲಿಸುವುದು ಒಕ್ಕೂಟದ ಚುನಾವಣಾ ವಿಜಯದ ಮೇಲೆ ಹೊಂದಿದೆ.

ಆರೋಗ್ಯ ಮಾರ್ಗದರ್ಶಿಗಳ ದೆಹಲಿ ಚಲೋ

ಗ್ರಾಮೀಣ ಜನರ ಆರೋಗ್ಯಕ್ಕೆ ಮಾರ್ಗದರ್ಶಕರಾಗಿ ದುಡಿಯುವ ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಮಾಸಿಕ ವೇತನ ಎಷ್ಟು ಗೊತ್ತೆ! ಕೇವಲ 5 0 ರೂ.ಗಳು. ರಾಷ್ಟ್ರಾದ್ಯಂತ 3ಲಕ್ಷ ಮಾರ್ಗದರ್ಶಿಗಳು ಕೆಲಸ ಮಾಡುತ್ತಿರುವ ಯೋಜನೆಯಲ್ಲಿ ಕರ್ನಾಟಕವೊಂದರಲ್ಲೆ 76,000 ದುಡಿಯುತ್ತಿದ್ದಾರೆ. ಕೇಂದ್ರ ಸರ್ಕಾರ ಈ ಯೋಜನೆಯನ್ನು ರದ್ದುಗೊಳಿಸಲು ಯೋಚನೆಯಲ್ಲಿದ್ದು 3ಲಕ್ಷ ಮಾರ್ಗದರ್ಶಿಗಳಿಗೆ ಇದು ಗಂಡಾಂತರಕಾರಿಯಾಗಿ ಪರಿಣಮಿಸಿದೆ. ಈಗಾಗಲೇ ಎರಡುಬಾರಿ ರಾಜ್ಯದ ರಾಜಧಾನಿಗೆ ಬಂದು ನಿರಾಸರಾಗಿ ಹಿಂತಿರುಗಿ ಈಗ ದೆಹಲಿಯತ್ತ ಸಾಗಿರುವ ನೌಕರರು ಸಹಸ್ರಾರು ಸಂಖ್ಯೆಯಲ್ಲಿ 'ದೆಹಲಿ ಚಲೋ'ದಲ್ಲಿ ಭಾಗವಹಿಸಿ ಬೋಟ್ ಕ್ಲಬ್ ಮುಂದೆ ಧರಣಿ ಸತ್ಯಾಗ್ರಹ ನಡೆಸಲಿದ್ದಾರೆ.

ಬೇಡಿಕೆಗಳು

★ ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಸೇವೆಯನ್ನು ಮುಂದುವರಿಸಬೇಕು

★ ಮಾಸಿಕ ಗೌರವ ಧನ 5 00ಕ್ಕೆ ಹೆಚ್ಚಿಸಬೇಕು.

★ ಔಷಧ ಕಿಟ್‌ನ್ನು ಒದಗಿಸಬೇಕು.

ಮುಂತಾದ ಬೇಡಿಕೆ ಒತ್ತಾಯಿಸಿ ನಡೆಯುವ ಈ ಚಳುವಳಿಗೆ ದುಡಿಯುವ ಜನತೆ ಬೆಂಬಲಿಸಬೇಕೆಂದು ಸಂಘದ ಅಧ್ಯಕ್ಷ ವಿ.ಎನ್.ಹಳಕಟ್ಟಿಯವರು ಮನವಿ ಮಾಡಿದ್ದಾರೆ.

ನಾಗರಿಕ ಸೌಲಭ್ಯಕ್ಕಾಗಿ ಧರಣಿ ಹೋರಾಟಕ್ಕೆ ಜಯ

ರಾಯಚೂರು ನಗರದಲ್ಲಿ ನಾಗರೀಕ ಸೌಲಭ್ಯಗಳನ್ನು ಒತ್ತಾಯಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ರಾಯಚೂರು ತಾಲೂಕು ಸಮಿತಿ ಆಶ್ರಯದಲ್ಲಿ ಫೆಬ್ರುವರಿ 16ರಿಂದ 45 ದಿನಗಳು ಸರದಿ ಉಪವಾಸ ಸತ್ಯಾಗ್ರಹ ನಡೆಸಲಾಯಿತು. ಜಿಲ್ಲಾಧಿಕಾರಿಗಳೊಂದಿಗೆ ನಡೆದ ಮಾತುಕತೆಯಲ್ಲಿ ಹಲವು ಬೇಡಿಕೆಗಳ ಕುರಿತು ಈಡೇರಿಸುವ ಭರವಸೆ ದೊರೆತ ನಂತರ ಧರಣಿ ಮುಕ್ತಾಯಗೊಳಿಸಲಾಗಿದೆ.

ರಾಯಚೂರು ನಗರದ 4 ಗುಡಿಸಲು ವಾಸಿಗಳು ಈ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಮುನ್ನೂರು ವಾಡಿ ಹರಿಜನ-ಗಿರಿಜನರ ಗುಡಿಸಲುಗಳಿಗೆ ಹಕ್ಕುಪತ್ರ ನೀಡಬೇಕು. ಶಾಲಂಸಾಬ ದೊಡ್ಡಿಯನ್ನು ಕೊಳಚೆಪ್ರದೇಶವೆಂದು ಘೋಷಿಸಿ, ಹೈಕೋರ್ಟು ತಡೆಯಾಜ್ಞೆ ರದ್ದುಗೊಳಿಸಬೇಕು. ನವರಂಗ ದರವಾಜಾ ಕೊಳಚೆ ನಿವಾಸಿಗಳಿಗೆ ಮಂಜೂರಾದ ಮನೆಗಳಿಗೆ ಸ್ವಾದೀನ ಕೊಡಬೇಕು. ನಿರಬಾಯಿ ಕುಂಟಾ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸಿ ಶಾಲೆ ಪುನಃ ಆರಂಭಿಸಬೇಕು ಸ್ಲಮ್ ಬೋರ್ಡ್ ಅವ್ಯವಹಾರಗಳ ಬಗ್ಗೆ ತನಿಖೆ ನಡೆಯಬೇಕು. ತಳ್ಳುಬಂಡಿ ವರ್ತಕರ ಮೇಲಿನ ದೌರ್ಜನ್ಯ ನಿಲ್ಲಬೇಕು ಮುಂತಾದ ಬೇಡಿಕೆಗಳಲ್ಲಿ ಮುನ್ನೂರ ವಾಡಿ ನವರಂಗಾ ದರವಜಾ ಕೊಳಚೆ ನಿವಾಸಿಗಳಿಗೆ ಹಕ್ಕುಪತ್ರ ನೀಡಲು ನೀರ ಬಾಯಿ ಕುಂಟಾ ಶಾಲೆ ಪ್ರಾರಂಭಿಸಲು ಬೋರ್ಡು ಹಣ ದುರುಪಯೋಗದ ಕುರಿತು ತನಿಖೆ ನಡೆಸುವುದಾಗಿ ಶಾಲಂಸಾಬದೊಡ್ಡಿಯ ಹೈಕೋರ್ಟು ತಡೆಯಾಜ್ಞೆ ವಜಾಗೊಳಿಸಲು ಮುತುವರ್ಜಿ ವಹಿಸುವುದಾಗಿ ಆಶ್ವಾಸನೆ ನೀಡಿದರು. ನೀರಬಾಯಿ ಕುಂಟಾದ 700 ಗುಡಿಸಲು ವಾಸಿಗಳಿಗೆ ಶಾಶ್ವತ ನೀರು ಒದಗಿಸಲು ಬೇಕಾಗುವ ಅಂದಾಜು ಯೋಜನೆ ನೀಡುವಂತೆ ಆದೇಶ ನೀಡಲಾಗಿದೆ. ತಮ್ಮ ಬೇಡಿಕೆಗಳ ಕುರಿತು ಈಡೇರಿಸುವ ಭರವಸೆ ನೀಡಿದ ಜಿಲ್ಲಾಧಿಕಾರಿಗಳನ್ನು ಕಾರ್ಯದರ್ಶಿ ಸಿದ್ದಪ್ಪ ಅಧ್ಯಕ್ಷ ವೆಂಕಟೇಶ್ ಅಭಿನಂದಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಹೆಚ್ಚಿದ ಪೊಲೀಸ್ ದೌರ್ಜನ್ಯ

ಕೊಡಗು ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ವಿಪರೀತವಾದ ಪೊಲೀಸ್-ದಬ್ಬಾಳಿಕೆ, ದೌರ್ಜನ್ಯಗಳು ಬೆಳಕು ಕಾಣುತ್ತಿದ್ದು ಈ ಕುರಿತು ಜಿಲ್ಲಾ ಸೂಪರಿಂಟೆಂಡೆಂಟ್‌ರವರು ಕ್ರಮ ಕೈಗೊಳ್ಳಬೇಕೆಂದು ಪಕ್ಷದ ವಿರಾಜಪೇಟೆ ಶಾಖೆ ಒತ್ತಾಯಿಸಿದೆ.

ಕಳ್ಳತನದ ಸುಳ್ಳು ಕೇಸುಗಳನ್ನು ಹಾಕುವ, ದೂರು ನೀಡಲು ಹೋದ ಮಹಿಳೆಯರಿಗೆ ರಕ್ಷಣೆ ನೀಡದ, ಕಾರ್ಮಿಕರಿಗೆ ಕಿರುಕುಳ ಚಿತ್ರಹಿಂಸೆ ನೀಡುವ ಹಲವು ಪ್ರಕರಣಗಳಲ್ಲಿ ಕೆಲವು ಇಲ್ಲಿವೆ.

ಮಡಕೇರಿಯ ಉಪ ವಿಭಾಗಾಧಿಕಾರಿ ಮನೆ ಕಳ್ಳತನ ನಡೆದ ಪ್ರಕರಣದಲ್ಲಿ, ಸ್ಥಳೀಯ ವ್ಯಾಪಾರಿಯೊಬ್ಬರನ್ನು ದೈಹಿಕ ಚಿತ್ರಹಿಂಸೆ ನೀಡಿ ಕಳ್ಳತನದ ಆರೋಪ ಹೊರಿಸಲಾಗಿದೆ. ಗೋಣಿಕೊಪ್ಪದ ಮಹಿಳೆಯೊಬ್ಬರು ತಮ್ಮ ಮನೆಯಲ್ಲಿ ಕಳ್ಳತನವಾದ ಬಗ್ಗೆ ದೂರು ನೀಡಲು ಹೋದರೆ ಅದನ್ನು ದಾಖಲಿಸದೇ ಕಳ್ಳನ ಪತ್ತೆಯಾದರೂ ಬಂಧಿಸಿಲ್ಲ. ಸಿದ್ದಾಪುರದ ಬಡ ಕಾರ್ಮಿಕ ತನ್ನ ಪತ್ನಿಯ ಮೇಲೆ ಪ್ಲಾಂಟರ್ ನಡೆಸಿದ ಅತ್ಯಾಚಾರದ ಕುರಿತು ನೀಡಿದ ದೂರು ಸ್ವೀಕರಿಸದೇ ಆತನನ್ನೇ ಬಂಧಿಸಿ ಚೆನ್ನಾಗಿ ಥಳಿಸಿ ಜಾಮೀನಿನಲ್ಲಿ ಬಿಡುಗಡೆ ಮಾಡಲಾಯಿತು.

ಪಾಲಿಬೆಟ್ಟ ಹಾಗೂ ಕುಟ್ಟದ ಪೊಲೀಸರು ಕಾರ್ಮಿಕರ ಮೇಲೆ ಹಾಗೂ ಗಿರಿಜನರನ್ನು ಅಮಾನುಷವಾಗಿ ಥಳಿಸಿದರ ವಿರುದ್ಧ ಇಲ್ಲಿನ ಜನರು ಪ್ರತಿಭಟಿಸಿದ್ದಾರೆ. ಕಕ್ಕಬೆಯಲ್ಲಿ ಗಿರಿಜನರ ಮಂಡಲ ಪಂಚಾಯ್ತಿ ಸದಸ್ಯನನ್ನು ನಾಪೋಕ್ಲು ಸಬ್‌ಇನ್ಸ್‌ಪೆಕ್ಟರ್ ಥಳಿಸಿದ್ದಾರೆ.

ಈಗೆ ಇಡೀ ಜಿಲ್ಲೆಯಾದ್ಯಂತ ವ್ಯಾಪಕವಾಗಿ ಹಬ್ಬುತ್ತಿರುವ ಪೊಲೀಸ್ ಚಿತ್ರಹಿಂಸೆ ಕೊನೆಗೊಳ್ಳದಿದ್ದರೆ ಪಕ್ಷ ಜನರನ್ನು ಸಂಘಟಿಸಿ ತೀವ್ರ ರೀತಿಯ ಹೋರಾಟಕ್ಕೆ ಧುಮುಕಬೇಕಾಗುತ್ತದೆ ಎಂದು ಎಚ್ಚರಿಸಿ ಇಂತಹ ಪೊಲೀಸ್ ದಬ್ಬಾಳಿಕೆಯಿಂದಲೇ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿದ್ದೆಂದು ಹೇಳಿಕೆಯಲ್ಲಿ ತಿಳಿಸಿ ರಾಜ್ಯ ಸರ್ಕಾರ ಜನತೆಯ ಸ್ವಾತಂತ್ರ್ಯ ಹಕ್ಕುಗಳನ್ನು ಗೌರವಿಸಬೇಕೆಂದು ಒತ್ತಾಯಿಸಿದೆ.

ಮಂಡಲಪಂಚಾಯ್ತಿ ನೌಕರರಿಗೆ ಸಚಿವರ ಭರವಸೆ

ರಾಜ್ಯದೆಲ್ಲೆಡೆಗಳಿಂದ ಏಪ್ರಿಲ್ 1ರಂದು ಬೆಂಗಳೂರಿಗೆ ಆಗಮಿಸಿ ವಿಧಾನಸೌಧ ಚಲೋ ನಡೆಸಿದ ಮಂಡಲ ಪಂಚಾಯ್ತಿ ನೌಕರರು ತಮ್ಮ ನ್ಯಾಯ ಸಮ್ಮತ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿದ್ದರು. ನೌಕರ ಸಂಘ ಹಾಗೂ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಂ.ಪಿ. ಪ್ರಕಾಶ್‌ರವರೊಡನೆ ಮಾತುಕತೆ ನಡೆದು ಮಂಡಲ ಪಂಚಾಯ್ತಿ ನೌಕರರಿಗೆ ನೌಕರಿ ಭದ್ರತೆ ಒದಗಿಸಿ ತೆಗೆದುಹಾಕಿದ ನೌಕರರನ್ನು ಪುನಃ ನೇಮಿಸುವುದಾಗಿ ಭರವಸೆ ನೀಡಿದರು. ಅಕೌಂಟೆಂಟ್‌ಕಮ್ ಕ್ಲಾರ್ಕ್‌ಗಳಿಗೆ 2ನೇ ದರ್ಜೆ ಸಹಾಯಕರ ವೇತನ ಕೊಡುವುದೆಂದು ಹಾಗೂ ಇತರೆ ವರ್ಗದವರಿಗೆ ಸರ್ಕಾರಿ ನೌಕರರ ಕನಿಷ್ಠ ವೇತನ ನೀಡಬೇಕೆಂದು ಸಂಘ ಮಾಡಿದ ಒತ್ತಾಯದ ಕುರಿತು ಪರಿಶೀಲಿಸಿ ಒಂದು ತಿಂಗಳಲ್ಲಿ ನಿರ್ಣಯ ಕೈಗೊಳ್ಳುವುದಾಗಿ ತಿಳಿಸಿದರು. ಸೇವಾ ನಿಯಮಾವಳಿ ಕುರಿತು ಚರ್ಚೆ ಮುಂದುವರಿಸುವುದಾಗಿ ಸಚಿವರು ಆಶ್ವಾಸನೆ ನೀಡಿದರು. ಈ ನಿಯೋಗದಲ್ಲಿ ಸಂಘದ ಕಾರ್ಯದರ್ಶಿ ಕಾ॥ ಎನ್.ಕೆ.ಉಪಾಧ್ಯಾಯ, ಅಧ್ಯಕ್ಷ ಕೆ.ಜಿ. ಕೃಷ್ಣೇಗೌಡ, ಪ್ರಧಾನಕಾರ್ಯದರ್ಶಿ ಕಾ॥ ಕೆ.ಸುಂದರಪ್ರಭು, ಹರಿಕೃಷ್ಣ, ಶಿವಕ್ಕಾಯ, ಮಲ್ಲಪ್ಪ ಉಪ್ಪಾರ, ರಾಜಣ್ಣ ಪಟ್ಟಣಕರ, ಭೀಮಸಿ ಕಲಾದಗಿಯವರು ಭಾಗವಹಿಸಿದ್ದರು.

ಪಾಲಿಫೈಬರ್ ಕಾರ್ಮಿಕರ ವೇತನದಲ್ಲಿ ಹೆಚ್ಚಳ

ಹರಿಹರ ಪಾಲಿಫೈಬರ್ಸ್ ಎಂಪ್ಲಾಯಿಸ್ ಯೂನಿಯನ್ (ಸಿ.ಐ.ಟಿ.ಯು.) ಹಾಗೂ ಆಡಳಿತ ವರ್ಗದೊಡನೆ ಮಾರ್ಚ್ 25 ರಂದು ಏರ್ಪಟ ಒಪ್ಪಂದದಂತೆ ಪ್ರತಿ ಕಾರ್ಮಿಕನ ಮೂಲ ವೇತನದಲ್ಲಿ 121- ರೂ. ಕನಿಷ್ಠ ರೂ. 5 ಯಿಂದ ಗರಿಷ್ಠ 19, ಸರ್ವೀಸ್ ವೇಟೇಜ್ ಮತ್ತು ಫಿಟಮೆಂಟ್ 1ರೂ.ನಿಂದ 24ರೂ.ವರೆವಿಗೂ ಸಿಗುವುದು. ಹೆಚ್ಚುವರಿ ವೇತನದಿಂದ ಪ್ರತಿ ತಿಂಗಳಿಗೆ ಕನಿಷ್ಠ 24 ರೂ. ಮತ್ತು ಗರಿಷ್ಠ 286 ರೂ. ಹೆಚ್ಚುವರಿ ಸಿಗುವುದು. ಏಪ್ರಿಲ್‌ನಿಂದ ಜಾರಿಯಾಗುವ ಬಳಕದಾರರ ಬೆಲೆ ಸೂಚ್ಯಂಕದಲ್ಲಿ ಪ್ರತಿ ಅಂಶಕ್ಕೆ 1.30ಗಳ ಬದಲಾಗಿ 1.45 ಗಳು ಸಿಗುತ್ತದೆ. ಈ ಒಪ್ಪಂದ ಡಿಸೆಂಬರ್ 1, 1988ರಿಂದ ಮೂರು ವರ್ಷ ಜಾರಿಯಲ್ಲಿರುತ್ತದೆ.

ಕಾರ್ಮಿಕ ಸಂಘದ ಪರವಾಗಿ ಅಧ್ಯಕ್ಷರಾದ ಕಾ॥ ವಿ.ಜೆ.ಕೆ.ನಾಯರ್, ಪ್ರಧಾನ ಕಾರ್ಯದರ್ಶಿ ಧ್ರುವಕುಮಾರ್ ಇನಾಂದರ್ ಉಪಾಧ್ಯಕ್ಷ ಕಾ॥ ಎಂ.ಜಯಪ್ಪ, ಸಹಕಾರ್ಯದರ್ಶಿ ಕಾ॥ ಆನಂದರಾವ್, ಖಜಾಂಚಿ ಚಂದ್ರಪ್ಪ ಭಾಗವಹಿಸಿದರು.

ಒಪ್ಪಂಡ ಏರ್ಪಡಲು ಸಹಕರಿಸಿದ ಕಾರ್ಮಿಕರು ಆಡಳಿತ ವರ್ಗಕ್ಕೆ ಸಂಘದ ಅಧ್ಯಕ್ಷ ಕಾ॥ ವಿ.ಜೆ.ಕೆ.ಯವರು ಹಾಗೂ ಇನಾಂದರ್‌ರವರು ಕೃತಜ್ಞತೆ ಸಲ್ಲಿಸಿದ್ದಾರೆ.

ಗೌರಿಬಿದನೂರು ಸಮಾವೇಶ

ಗೌರಿಬಿದನೂರು ತಾಲೂಕು ಸಮಾವೇಶವು ದಿನಾಂಕ ಏಪ್ರಿಲ್ 11ರಂದು ಜರುಗಿತು. ಉದ್ಘಾಟಕರಾಗಿ ಕಾ॥ ಶಾಂತಕುಮಾರಿಯವರು ಭಾಗವಹಿಸಿ ಮಹಿಳಾ ಸಂಘಟನೆ ಅವಶ್ಯಕತೆ ಹಾಗೂ ಪ್ರಜಾಪ್ರಭುತ್ವ ಚಳುವಳಿಯ ಕುರಿತು ಮಾತನಾಡಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರಾಜ್ಯ ಸಂಚಾಲಕಿ ಕಾ॥ ಹರಿಣಿಕ್ಕೇರಿಯವರು ದೇಶದಲ್ಲಿ ಉಂಟಾಗುತ್ತಿರುವ ಬದಲಾವಣೆಯಲ್ಲಿ ಮಹಿಳೆಯರ ಪಾತ್ರದ ಕುರಿತು ವಿವರಿಸಿ ಸಂಘಟನೆಯನ್ನು ಬಲಗೊಳಿಸಲು ಕರೆ ನೀಡಿದರು. ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದ ಕೃಷಿ ಕೂಲಿಕಾರ ಸಂಘಟನೆಯ ರಾಜ್ಯ ಸಂಚಾಲಕ ಕಾ॥ ಜಿ.ವಿ. ಶ್ರೀರಾಮರೆಡ್ಡಿಯವರು ಮಹಿಳೆಯರ ಸಂಘಟನೆ ಎಲ್ಲಿಯತನಕ ಪ್ರಜಾಪ್ರಭುತ್ವ ಹೋರಾಟದಲ್ಲಿ ಪಾಲ್ಗೊಳ್ಳುವುದಿಲ್ಲವೋ ಅಲ್ಲಿಯವರೆಗೂ ಪುರುಷ ವಿರೋಧಿ ಸಂಘಟನೆಯಾಗುತ್ತದೆ ಎಂದು ಎಚ್ಚರಿಸಿ ಮಹಿಳಾ ಸಂಘಟನೆ ಸಾಗಬೇಕಾದ ಗುರಿಯ ಕುರಿತು ವಿವರಿಸಿದರು. ಸಮಾವೇಶದ ಅಧ್ಯಕ್ಷತೆಯನ್ನು ಕೋಲಾರ ಜಿಲ್ಲಾ ಸಹ ಸಂಚಾಲಕಿ ಕಾ॥ ಪರ್ವಿನ್ ತಾಜ್ ವಹಿಸಿದ್ದರು. ಕೊನೆಯಲ್ಲಿ 18ಜನರ ತಾಲೂಕು ಸಂಘಟನಾ ಸಮಿತಿ ರಚಿಸಲಾಯಿತು.

ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಸಮಿತಿ ಪಕ್ಷದ ಪ್ರಾತಿನಿಧ್ಯಕ್ಕೆ ಒತ್ತಾಯ

ಅಧಿಕಾರೇತರ ಸದಸ್ಯರಿರುವ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಸಮಿತಿಯೊಂದನ್ನು ಆಹಾರ ಮತ್ತು ನಾಗರೀಕ ಖಾತೆ ಸಚಿವ ವಿಶ್ವನಾಥರೆಡ್ಡಿ ಮುದ್ನಾಳರ ಸಂಚಾಲಕತ್ವದಲ್ಲಿ ನೇಮಿಸಿರುವುದನ್ನು ಸಿ.ಪಿ.ಐ.(ಎಂ) ರಾಜ್ಯ ಸೆಕ್ರಟಾರಿಯೇಟ್ ಸದಸ್ಯ ಕಾ॥ ಎನ್.ಕೆ. ಉಪಾಧ್ಯಾಯ ಹಾಗೂ ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿ ಕಾ॥ ಕಲಪ್ಪ ಕಿರಣಗಿಯವರು ಹೇಳಿಕೆಯಲ್ಲಿ ಖಂಡಿಸಿದ್ದಾರೆ.

ರಾಜ್ಯದ ಮುಖ್ಯಮಂತ್ರಿ ವಿಧಾನ ಸಭೆಯಲ್ಲಿ ಅಧಿಕಾರೇತರರನ್ನು ನೇಮಿಸುವ ಆಶ್ವಾಸನೆ ನೀಡಿದ್ದರು. ಕ್ಯಾಬಿನೆಟ್ ಸಚಿವರನ್ನು ಸಂಚಾಲಕರನ್ನಾಗಿ ನೇಮಿಸುವುದು ಹಾಗೂ ಈ ಸಮಿತಿಯಲ್ಲಿ ಜನತಾದಳ ಮತ್ತು ಕಾಂಗ್ರೆ ಪ್ರತಿನಿಧಿಗಳನ್ನು ಮಾತ್ರ ಸೇರಿಸಿರುವುದನ್ನು ತೀವ್ರವಾಗಿ ಪ್ರತಿಭಟಿಸಿ ಈ ಸಮಿತಿಯಲ್ಲಿ ಕಮ್ಯೂನಿಸ್ಟ್ ಪಕ್ಷಗಳಿಗೆ ಪ್ರಾತಿನಿಧ್ಯ ನೀಡಬೇಕೆಂದು ಅವರು ಒತ್ತಾಯಿಸಿದ್ದಾರೆ.

ರಾಜ್ಯ ಸರ್ಕಾರ ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿಗಾಗಿ ಒಂದು ಅಭಿವೃದ್ಧಿ ಪ್ರಾಧಿಕಾರ ನೇಮಿಸಿ ಅದಕ್ಕೆ ಸಾಕಷ್ಟು ಹಣ ಮೀಸಲಾಗಿಡಬೇಕೆಂದು ಆ ಪ್ರಾಧಿಕಾರದಲ್ಲಿ ಎಲ್ಲಾ ರಾಜಕೀಯ ಪಕ್ಷಗಳಿಗೆ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸಲಾಗಿದೆ.

ಮಹಿಳಾ ಸಂಘಟನೆ ಬೀದರ ಸಮಾವೇಶ

ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಬೀದರ ಪ್ರಥಮ ಸಮಾವೇಶ ಮಾರ್ಚ್ 20ರಂದು ಕಾ॥ ಸಪ್ದರ್ ಹಾಶ್ಮಿಯವರಿಗೆ ಶ್ರದ್ಧಾಂಜಲಿ ಅರ್ಪಿಸುವುದರೊಂದಿಗೆ ಆರಂಭವಾಯಿತು. ನೀಲಾ ಕೆ.ರವರು ಪ್ರಾಸ್ತಾವಿಕವಾಗಿ ಮಾತನಾಡಿ ಜಿಲ್ಲೆಯಲ್ಲಿ ಮಹಿಳೆಯರ ಕುರಿತು ಹಲವಾರು ಮಾತನಾಡಿದರು.

ರಾಜ್ಯ ಸಂಚಾಲಕಿ ಶ್ರೀಮತಿ ಹರಿಣಿಕಕ್ಕೇರಿಯವರು ಸಮಾವೇಶವನ್ನು ಉದ್ಘಾಟಿಸಿದರು. ಸಂಘಟನೆಯ ಧ್ಯೇಯ ಧೋರಣೆ ಕುರಿತು ಮಾತನಾಡಿದರು. ರಾಜ್ಯ ಸಮಿತಿ ಸದಸ್ಯೆ ಶ್ರೀಮತಿ ಮಹದೇವಿ ಸಜ್ಜನ್‌ರವರು ಮಾತನಾಡಿದರು. ಅಕ್ಕ ಮಹಾದೇವಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಮತಿ ಲೀಲಾವತಿ ಚಕೋತೆಯವರು ಮಾತನಾಡಿದರು.

ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ 2ನೇ ಅಧಿವೇಶನದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಶ್ರೀಮತಿ ಹರಿಣಿಕಕ್ಕೇರಿಯವರು ಪ್ರಜಾಪ್ರಭುತ್ವದಲ್ಲಿ ಮಹಿಳೆಯರ ಹಕ್ಕುಗಳು ಕುರಿತು ಪ್ರಬಂಧ ಮಂಡಿಸಿ ಮಾತನಾಡಿದರು. ಪ್ರೊ॥ ಆರ್.ಕೆ. ಹುಡುಗಿಯವರು ರಾಷ್ಟ್ರೀಯ ಸಮಗ್ರತೆ ಕುರಿತು ಪ್ರಬಂಧ ಮಂಡಿಸಿ ಮಾತನಾಡಿದರು. ಡಾ॥ ಲೀಲಾವತಿ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು.

ನೂತನ ಜಿಲ್ಲಾ ಸಮಿತಿ ಸಂಚಾಲಕಿಯನ್ನಾಗಿ ಶ್ರೀಮತಿ ನೀಲಾಕೆ. ಸಹ ಸಂಚಾಲಕಿಯಾಗಿ ಸುಧಿಷ್ ಹಾಗೂ ಬಂಗಾರಮ್ಮರವರನ್ನೊಳಗೊಂಡ 11 ಜನರ ಕಾರ್ಯಕಾರಿ ಸಮಿತಿ ಆರಿಸಲಾಯಿತು.

ಉಡುಪಿ ತಾಲೋಕು ಸಮಾವೇಶ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (ಎ.ಐ.ಡಿ.ಡಬ್ಲ್ಯು.ಎ.)ಯ ಉಡುಪಿ ತಾಲೂಕು ಮಟ್ಟದ ಪ್ರಪ್ರಥಮ ಸಂಘಟನಾ ಸಭೆಯು ಏ.4ರಂದು ಉಡುಪಿಯ ಎನ್.ಜಿ.ಒ. ಸಭಾಂಗಣದಲ್ಲಿ ನಡೆಯಿತು. ತಾಲೂಕಿನ ವಿವಿಧೆಡೆಗಳಿಂದ ಮಹಿಳೆಯರು ಈ ಸಭೆಯಲ್ಲಿ ಭಾಗವಹಿಸಿದ್ದರು. ಎ.ಐ.ಡಬ್ಲ್ಯು.ಎ. ಸದಸ್ಯತ್ವ ಹಾಗೂ ಸಂಘಟನೆಯನ್ನು ವಿಸ್ತರಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಎ.ಐ.ಡಿ.ಡಬ್ಲ್ಯು.ಎ. ರಾಜ್ಯ ಸಂಘಟನಾ ಸಮಿತಿ ಸದಸ್ಯೆ ಕಾ॥ ಎಸ್. ಆರ್.ಲೀಲಾವತಿಯವರು ಮಹಿಳಾ ಸಂಘಟನೆಯ ಧ್ಯೆಯೋದ್ದೇಶಗಳನ್ನು ವಿವರಿಸಿದರು. ಕಾರ್ಮಿಕ ಮುಖಂಡರುಗಳಾದ ಕಾ॥ ದೇವಿಡ್ ಕರ್ಕಡ ಮತ್ತು ವಿಶ್ವನಾಥಶೆಟ್ಟಿಯವರುಗಳೂ ಹಾಜರಿದ್ದರು.

ಕಾ॥ ಒಲಿಪಿಯಾ ಫರ್ನಾಂಡಿಸ್ ಸಂಚಾಲಕರಾಗಿರುವ ಬೇಬಿ, ರಾಜೀವಿ, ವಸಂತಿ, ಸುಮತಿ, ಸುನಂದ ಕಲ್ಯಾಣಿ, ಜಲಜ, ಅಕ್ಕಣ್ಣಿ ಮತ್ತು ವಸಂತಿ ಸದಸ್ಯರಾಗಿರುವ ಸಂಘಟನಾ ಸಮಿತಿಯನ್ನು ರಚಿಸಲಾಯಿತು.

ಮೂರನೇ ರಂಗದ ತಂತ್ರ ಸಲ್ಲದು

ಈ ಚುನಾವಣಾ ವರ್ಷದಲ್ಲಿ ಕಾಂಗ್ರೆಸ್(ಐ) ಅದಕ್ಕೆ ಸಿದ್ಧತೆ ನಡೆಸುವಲ್ಲಿ ವ್ಯಸ್ತವಾಗಿರುವಾಗ, ವಿರೋಧ ಪಕ್ಷಗಳೂ ಸಂಯೋಜಿತ ಪ್ರಯತ್ನಗಳಿಂದ ಪರ್ಯಾಯ ಶಕ್ತಿಯಾಗಿ ಮೂಡಿಬರಲು ಶ್ರಮಿಸುತ್ತಿರುವಾಗ ಕಾಂಗ್ರೆಸ್(ಐ)ನ್ನು ಅಧಿಕಾರದಿಂದಿಳಿಸುವ ಕೆಲಸದಲ್ಲಿ ಪ್ರಮುಖ ಪಕ್ಷವಾಗಿರುವ ತೆಲುಗುದೇಶಂ ಪಕ್ಷದೊಳಗೆ ಉಂಟಾಗಿರುವ ಪರಿಸ್ಥಿತಿ ಖೇದನೀಯವೆಂದು ಸಿ.ಪಿ.ಐ.(ಎಂ) ಆಂಧ್ರ ರಾಜ್ಯ ಸಮಿತಿ ಹೇಳಿದೆ.

ಮಾರ್ಚ್24ರಿಂದ 26ರವರೆಗೆ ವಿಜಯವಾಡಾದಲ್ಲಿ ಅದು ಸಭೆ ಸೇರಿ ಅಂಗೀಕರಿಸಿದ ರಾಜಕೀಯ ನಿರ್ಣಯ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಇದು ತೆಲುಗುದೇಶಂನ ಆಂತರಿಕ ವಿಷಯವಾದರೂ ಸಮಸ್ತ ಮಂತ್ರಿ ಮಂಡಲವನ್ನು ವಜಾ ಮಾಡಿ ಎಲ್ಲಾ ಹೊಸ ಮುಖಗಳನ್ನೇ ಸೇರಿಸಿಕೊಂಡಿರುವ ಮುಖ್ಯಮಂತ್ರಿಗಳ ಕ್ರಮದ ದುಷ್ಪರಿಣಾಮಗಳ ಬಗ್ಗೆ ಸಿ.ಪಿ.ಐ.(ಎಂ) ಎಚ್ಚರ ನೀಡಿತ್ತು. ಆಂತರಿಕ ಪ್ರಶ್ನೆಗಳನ್ನು ಪ್ರಜಾಸತ್ತಾತ್ಮಕವಾಗಿ ಪರಿಹರಿಸಿಕೊಳ್ಳಲಾಗುವುದೆಂದು ಅದು ಆಶಿಸಿತ್ತು. ಆದರೆ ಹಾಗಾಗದೆ ಆ ಪಕ್ಷದ ಆಂತರಿಕ ಪ್ರಜಾಪ್ರಭುತ್ವಕ್ಕೆ ಹಾಗೂ ಶಿಸ್ತಿಗೆ ಭಂಗ ತರುವ ಬೆಳವಣಿಗೆಗಳು ನಡೆದಿರುವ ಬಗ್ಗೆ ನಿರ್ಣಯ ಖೇದವನ್ನು ವ್ಯಕ್ತಪಡಿಸುತ್ತಾ ಇದು ಕಾಂಗ್ರೆಸ್(ಐ)ಗಷ್ಟೇ ಸಂತಸ ತರುವ ವಿಷಯ ಎಂದಿದೆ.

ತೆಲುಗುದೇಶಂನಿಂದ ಸಿಡಿದು ಬೇರೆ ಪಕ್ಷ ರಚಿಸಿಕೊಳ್ಳುವ ಬಗ್ಗೆ ಯೋಚಿಸುತ್ತಿರುವವರು ಮೂರನೇ ರಂಗ ಸ್ಥಾಪಿಸುವ ವಿಚಾರದಲ್ಲಿದ್ದಾರೆಂದು ವರದಿಯಾಗಿದೆ. ಈಗಾಗಲೇ ಸಿ.ಪಿ.ಐ. ಸ್ಥಾಪಿಸಿರುವ ರಂಗ ಕಾಂಗ್ರೆಸ್(ಐ) ವಿರೋಧಿ ಹೋರಾಟದ ಭಾಗವಾಗಲು ಸಾಧ್ಯವಾಗದೆ, ಅದು ನೇರವಾಗಿಯೋ, ಪರೋಕ್ಷವಾಗಿಯೋ ಕಾಂಗ್ರೆಸ್(ಐ)ಗೇ ನೆರವಾಗುತ್ತಿರುವುದರತ್ತ ನಿರ್ಣಯ ಗಮನ ಸೆಳೆದಿದೆ. ಸಿ.ಪಿ.ಐ.ನ ಕಲ್ಕತ್ತಾ ಮಹಾಧಿವೇಶನ ಇಡೀ ದೇಶದಲ್ಲಿ ಅದು ಕಾಂಗ್ರೆಸ್(ಐ) ವಿರುದ್ಧ ನಿಲ್ಲಬಹುದೆಂಬ ನಿರೀಕ್ಷೆ ಮೂಡಿಸಿತ್ತು. ಆದರೆ ಮಹಾಧಿವೇಶನದಿಂದ ಮರಳಿದ ಸಿ.ಪಿ.ಐ. ರಾಜ್ಯ ಮಂಡಳಿಯ ಕಾರ್ಯದರ್ಶಿಯ ಹೇಳಿಕೆ ಇದನ್ನು ಹುಸಿಗೊಳಿಸಿದೆ.

ಕಾಂಗ್ರೆಸ್(ಐ)ನ್ನು ವಿರೋಧಿಸುವಲ್ಲಿ, ಎಡ ಐಕ್ಯತೆಯಲ್ಲಿ ಸಿ.ಪಿ.ಐ.ಗೆ ನಿಜವಾಗಿಯೂ ಆಸಕ್ತಿಯಿದ್ದರೆ ಈ ವಿನಾಶಕಾರೀ ನಿಲುವನ್ನು ಬಿಟ್ಟುಕೊಡಬೇಕೆಂದು ಸಿ.ಪಿ.ಐ.ಗೆ ಮತ್ತೆ ಮನವಿ ಮಾಡಿಕೊಂಡಿರುವ ರಾಜಕೀಯ ನಿರ್ಣಯ ಈಗಾಗಲೇ ನಗೆಗೀಡಾಗಿ ಕಾರ್ಯತಃ ಆಕರ್ಷಣೆಗೆ ಕಳಕೊಂಡಿರುವ ಈ ಮೂರನೇ ರಂಗದ ತಂತ್ರವನ್ನು ತ್ಯಜಿಸಬೇಕೆಂದು ಈ ಬಗ್ಗೆ ಯೋಚಿಸುತ್ತಿರುವ ತೆಲುಗುದೇಶಂನಿಂದ ಹೊರಬರಬೇಕೆಂದಿರುವವರಿಗೂ ಮನವಿ ಮಾಡಿಕೊಂಡಿದೆ. ಕಾಂಗ್ರೆಸ್(ಐ)ನ್ನು ವಿರೋಧಿಸುವ ಬಗ್ಗೆ ಇವರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿದ್ದಂತೆ ಕಾಣುವುದಿಲ್ಲ. ಅಥವಾ ಬೇರೆ ರಾಜಕೀಯ ಭಿನ್ನಾಭಿಪ್ರಾಯಗಳೂ ಕಾಣುತ್ತಿಲ್ಲದಿರುವಾಗ ಮೂರನೇ ರಂಗದ ತಂತ್ರ ಸಲ್ಲದು ಎಂದು ಸಿ.ಪಿ.ಐ.(ಎಂ) ಹೇಳಿದೆ. ಅದೇ ವೇಳೆಗೆ ತೆಲುಗುದೇಶಂ ಸರ್ಕಾರ ತನ್ನ ಜನವಿರೋಧಿ ಧೋರಣೆಗಳನ್ನು ಬಿಟ್ಟುಕೊಡುವಂತೆ ಒತ್ತಡ ತರುವುದಕ್ಕಾಗಿ ಚಳುವಳಿ, ಹೋರಾಟಗಳನ್ನು ಸಿ.ಪಿ.ಐ.(ಎಂ) ಮುಂದುವರಿಸುವುದಾಗಿಯೂ ರಾಜಕೀಯ ನಿರ್ಣಯ ತಿಳಿಸಿದೆ.

ಭೋಪಾಲ್ ತೀರ್ಪಿನ ವಿರುದ್ಧ ಹೋರಾಟಕ್ಕೆ ಎನ್.ಸಿ.ಸಿ. ಬೆಂಬಲ

ಭೋಪಾಲ್ ಅನಿಲ ದುರಂತದ ಬಗ್ಗೆ ಸುಪ್ರೀಂಕೋರ್ಟಿನ ತೀರ್ಪಿನ ವಿರುದ್ಧ ಭೋಪಾಲ್ ಗ್ಯಾಸ್ ಪೀಡಿತ ಸಂಘರ್ಷ ಸಹಯೋಗ ಸಮಿತಿ ಆರಂಭಿಸಿರುವ ಹೋರಾಟಕ್ಕೆ ತನ್ನ ಪೂರ್ಣ ಬೆಂಬಲವನ್ನು ಕಾರ್ಮಿಕ ಸಂಘಗಳ ರಾಷ್ಟ್ರೀಯ ಪ್ರಚಾರ ಸಮಿತಿ ವ್ಯಕ್ತಪಡಿಸುತ್ತಾ ಏಪ್ರಿಲ್ 13ರಿಂದ 18ರವರೆಗೆ ಈ ಬಗ್ಗೆ ಪ್ರತಿಭಟನಾ ಸಪ್ತಾಹ ಆಚರಿಸಿ ಏ. 19ರಂದು ರಾಷ್ಟ್ರೀಯ ಪ್ರತಿಭಟನಾ ಆಚರಿಸಬೇಕೆಂದು ಕರೆ ನೀಡಿದೆ.

ದೆಹಲಿ ಮಹಿಳಾ ಕಾರ್ಮಿಕರ ಧರಣಿ

ಕೇಂದ್ರ ಗೃಹ ಮಂತ್ರಿಗಳ ನಿವಾಸದೆದುರು ಏಪ್ರಿಲ್ 6ರಂದು ದಿಲ್ಲಿಯ ಸಾಮಾಜಿಕ ಕಲ್ಯಾಣ ಇಲಾಖೆಯಲ್ಲಿ ದುಡಿಯುತ್ತಿರುವ ಮಹಿಳೆಯರು ಅನಿರ್ದಿಷ್ಟಕಾಲದ ಧರಣಿ ಮತ್ತು ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ದಿಲ್ಲಿ ಆಡಳಿತದ 18 ಕಲ್ಯಾಣ ಕೇಂದ್ರಗಳಲ್ಲಿ ದುಡಿಯುತ್ತಿರುವ ಸುಮಾರು 300 ನಿರಾಶ್ರಿತರಾಗಿ ಬಂದ ಮಹಿಳೆಯರ ದುಡಿಮೆಯ ಸ್ಥಿತಿ ಅತ್ಯಂತ ಶೋಚನೀಯ. ಅವರಿಗೆ ಸಿಗುವ ಪೀಸ್‌ರೇಟ್ ಕೂಲಿ ತಿಂಗಳಿಗೆ 25 0ರೂ. ನಷ್ಟೂ ಆಗುವುದಿಲ್ಲ. ಇದನ್ನು ಕೂಡ 1983ರ ಅನಿರ್ದಿಷ್ಟ ಮುಷ್ಕರದ ನಂತರವಷ್ಟೇ ನಿಗದಿಗೊಳಿಸಲಾಯಿತು. ಅನಂತರ ಸರ್ಕಾರ ಬಹಳಷ್ಟು ಆಶ್ವಾಸನೆಗಳನ್ನು ನೀಡಿದ್ದರೂ ಯಾವುದೂ ಜ್ಯಾರಿಯಾಗಿಲ್ಲವಾದ್ದರಿಂದ ಈ ಮಹಿಳಾ ಕಾರ್ಮಿಕರು ಈ ಕಾರ್ಯಾಚರಣೆಗಿಳಿಯಬೇಕಾಗಿ ಬಂದಿದೆ.

ಸಿ.ಐ.ಟಿ.ಯು. ಕಾರ್ಯದರ್ಶಿ ವಿಮಲಾ ರಣದಿವೆಯವರು ಈ ಹೋರಾಟಕ್ಕೆ ಸಿ.ಐ.ಟಿ.ಯು. ಬೆಂಬಲ ವ್ಯಕ್ತಪಡಿಸುತ್ತಾ ತಕ್ಷಣ ಅವರ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಒತ್ತಾಯಿಸಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆಗೆ ಕಾರ್ಮಿಕರ ಲಗ್ಗೆ

ಮುಂಬೈಯ ಸಿ.ಐ.ಟಿ.ಯು. ಸಂಘಗಳ ಸಾವಿರಾರು ಸದಸ್ಯರು ಮಾರ್ಚ್ 20ರಂದು ಮಹಾರಾಷ್ಟ್ರ ವಿಧಾನಸಭೆಯತ್ತ ನಡೆದು ಮತ ಪ್ರದರ್ಶನ ನಡೆಸಿ ತಮ್ಮ ಐದು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದರು. ಈ ಐದು ಬೇಡಿಕೆಗಳು ಕೇವಲ ಮುಂಬೈಯ ಸಿ.ಐ.ಟಿ.ಯು. ಕಾರ್ಮಿಕರದಷ್ಟೇ ಆಗಿರದೆ ಇಡೀ ಮಹಾರಾಷ್ಟ್ರದ ಕಾರ್ಮಿಕ ವರ್ಗದ ಜ್ವಲಂತ ಪ್ರಶ್ನೆಗಳ ಇತ್ತೀಚಿನ ಬಜೆಟ್‌ನಲ್ಲಿ ಕಾರ್ಮಿಕರು ಮತ್ತು ನೌಕರರ ಮೇಲೆ ದಿಢೀರನೆ ಹೆಚ್ಚಿಸಿದ ವೃತ್ತಿ ತೆರಿಗೆಯ ರದ್ದತಿ, ಎಲ್ಲಾ ಉದ್ದಿಮೆಗಳಲ್ಲಿ 5 ದಿನಗಳ ವಾರ, ಬಾಡಿಗೆ ಭತ್ಯೆಯ ಬಗ್ಗೆ ರಾಜ್ಯ ಸರ್ಕಾರದ ಶಾಸನದ ಜ್ಯಾರಿ 1982 ಆಧಾರಿತ ಬೆಲೆ ಸೂಚ್ಯಂಕದ ರದ್ದತಿ, ಕನಿಷ್ಠ ಕೂಲಿ ಶಾಸನದಲ್ಲಿ ಸೂಕ್ತ ತಿದ್ದುಪಡಿ ಮಾಡಿ ಅದರ ಕಟ್ಟುನಿಟ್ಟಾದ ಜ್ಯಾರಿಗೆ ಅವಕಾಶ ಹಾಗೂ 15 ಸಾವಿರಕ್ಕೂ ಹೆಚ್ಚು ಮುಚ್ಚಿದ ಕಾರ್ಖಾನೆಗಳನ್ನು ತೆರೆಯಬೇಕು ಹಾಗೂ ಎಲ್ಲಾ ಗಿರಣಿಗಳನ್ನು ಸರ್ಕಾರ ವಹಿಸಿಕೊಳ್ಳಬೇಕು- ಇವೇ ಐದು ಬೇಡಿಕೆಗಳ ಮೇಲೆ ಈ ಮತಪ್ರದರ್ಶನ ನಡೆಯಿತು.

ಬಿಹಾರದಲ್ಲಿ ಸಾಮೂಹಿಕ ಅತ್ಯಾಚಾರದ ಖಂಡನೆ

ಮಾರ್ಚ್ 31ರ ರಾತ್ರಿ ಬಿಹಾರ ರಾಜ್ಯದ ಜಹಾನಾಬಾದ್ ಜಿಲ್ಲೆಯಲ್ಲಿ ಆದಿವಾಸಿ ಯುವತಿಯರ ಮೇಲೆ ಸಶಸ್ತ್ರ ಕ್ರಿಮಿನಲ್‌ಗಳ ಸಾಮೂಹಿಕ ಅತ್ಯಾಚಾರ ನಡೆಸಿದ ಮತ್ತೊಂದು ಘಟನೆ ವರದಿಯಾಗಿದೆ. ಪೊಲೀಸಿನವರ ಮೂಗಿನಡಿಯಲ್ಲೇ ಇದು ನಡೆದಿದೆ. ಏಪ್ರಿಲ್ 2ರಂದು ಪಾಟ್ನಾದಲ್ಲಿ ಸಭೆ ಸೇರಿದ ಸಿ.ಪಿ.ಐ.(ಎಂ), ರಾಜ್ಯ ಸೆಕ್ರೆಟಾರಿಯೇಟ್ ಇದನ್ನು ಬಲವಾಗಿ ಖಂಡಿಸುತ್ತಾ ಕಾಂಗ್ರೆಸ್(ಐ) ಆಳ್ವಿಕೆಯಲ್ಲಿ ಮಹಿಳೆಯರ ಮಾನ ಸುರಕ್ಷಿತವಿಲ್ಲವೆಂಬುದಕ್ಕೆ ಈ ಘಟನೆ ಇನ್ನೊಂದು ಉದಾಹರಣೆಯಾಗಿದೆ ಎಂದಿದೆ. ಕಾಂಗ್ರೆಸ್(ಐ) ಆಡಳಿತ ರಾಜ್ಯದಲ್ಲಿರುವ ಇಂತಹ ಹಲವಾರು ಮಾಫಿಯಾ ಗ್ಯಾಂಗ್‌ಗಳಿಗೆ ಶರಣಾಗಿರುವುದೇ ಇದಕ್ಕೆ ಕಾರಣ. ಇತರ ದುರ್ಬಲ ವಿಭಾಗಗಳ ಮೇಲೂ ಇಂತಹ ಅತ್ಯಾಚಾರಗಳು ಹೆಚ್ಚುತ್ತಿವೆ. ಇದರ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತಪಡಿಸಬೇಕೆಂದು ಸೆಕ್ರೆಟಾರಿಯೇಟ್ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಪಂಜಾಬಿನಲ್ಲಿ ರೈತರ ಐಕ್ಯ ಕಾರ್ಯಾಚರಣೆ

ಕಳೆದ ಸೆಪ್ಟೆಂಬರ್‌ನಲ್ಲಿ ನೆರೆ ಹಾವಳಿಯಿಂದ ಸಂತ್ರಸ್ತರಾದ ರೈತರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿ ಸಿ.ಪಿ.ಐ.(ಎಂ) ಹಾಗೂ ಸಿ.ಪಿ.ಐ. ನೇತೃತ್ವದ ಕಿಸಾನ್ ಸಭಾಗಳು ಮತ್ತು ಕೀರ್ತಿ ಕಿಸಾನ್ ಸಭಾ ಜಂಟಿಯಾಗಿ ಮಾರ್ಚ್ 27ರಿಂದ 31ರವರೆಗೆ ಜಾಲಂಧರ್‌ನಲ್ಲಿ ಸತ್ಯಾಗ್ರಹ ನಡೆಸಿದವು. ಎಂಟು ಜಿಲ್ಲೆಗಳಿಂದ ಒಟ್ಟು ಹತ್ತು ಸಾವಿರ ರೈತರು ಇದರಲ್ಲಿ ಪಾಲುಗೊಂಡರು.

ಮಾರ್ಚ್ 30ರಂದು ಪಂಜಾಬಿನ ರಾಜ್ಯಪಾಲರು ಜಾಲಂಧರ್‌ಗೆ ಬಂದಿದ್ದಾಗ ಅವರನ್ನು ಭೇಟಿಯಾಗಲು ಪೊಲೀಸರು ನಿರಾಕರಿಸಿದಾಗ ರೈತರು ಅಲ್ಲೇ ಧರಣಿ ನಡೆಸಿದರು. ನಿರ್ವಾಹವಿಲ್ಲದೆ ರಾಜ್ಯಪಾಲರು ಮೂರೂ ಕಿಸಾನ್ ಸಭಾಗಳ ಜಂಟಿ ನಿಯೋಗವೊಂದನ್ನು ಭೇಟಿಯಾಗಬೇಕಾಗಿ ಬಂತು.

ಚೀಣಾ ಜನತೆಯ ಆಯಸ್ಸು ದ್ವಿಗುಣಗೊಂಡಿದೆ

1949ರ ಮೊದಲು ಚೀಣಾದ ಸರಾಸರಿ ಆಯಸ್ಸು 35 ವರ್ಷ. ಜನತಾ ಚೀಣಾದ ಸ್ಥಾಪನೆಯ ನಾಲ್ಕು ದಶಕಗಳ ನಂತರ ಈಗ ಅದು 68-92 ವರ್ಷವಾಗಿದೆ. ಅಂದರೆ ಕ್ರಾಂತಿಯ ನಂತರ ಚೀಣೀ ಜನತೆಯ ಜೀವನ ಮಟ್ಟ ಸತತವಾಗಿ ಕಂಡು ಬಂದ ಹೆಚ್ಚಳ. ವೈದ್ಯಕೀಯ ಸೌಲಭ್ಯಗಳ ವ್ಯಾಪಕತೆಯಿಂದಾಗಿ ಇದು ಸಾಧ್ಯವಾಗಿದೆ. ಮರಣದರದಲ್ಲಿ ತೀವ್ರ ಕಡಿತವುಂಟಾಗಿದೆ.

ಈಗ ಚೀಣಾದ ಜನಸಂಖ್ಯೆ ಸುಮಾರು 110 ಕೋಟಿ 1988ರಲ್ಲಿ ಜನನ ದರ ಪ್ರತಿ ಸಾವಿರ ಜನಸಂಖ್ಯೆಗೆ 21. ಮರಣ ದರ ಪ್ರತಿಸಾವಿರ ಜನಸಂಖ್ಯೆಗೆ 7.

ಇಸ್ರೇಲೀ ಸೈನ್ಯದಿಂದ ವಿಷಾನಿಲಗಳ ಬರ್ಬರ ಬಳಕೆ

ಪ್ಯಾಲೆಸ್ಟೈನ್ ದಂಗೆಯನ್ನು ಬಗ್ಗುಬಡಿಯಲು ಇಸ್ರೇಲೀ ಪಡೆಗಳು ಬುಲೆಟ್‌ಗಳು, ಚಿತ್ರಹಿಂಸೆ, ಜೀವಂತ ಸುಡುವುದು ಅಥವಾ ಹೂಳುವುದು ಇಂತಹ ಬರ್ಬರ ಕ್ರಮಗಳೆಲ್ಲಕ್ಕಿಂತಲೂ ಹಿಂಸ್ರವಾದ ಅಶ್ರುವಾಯು ಬಳಸುತ್ತಿವೆ ಎಂದು ತಿಳಿದು ಬಂದಿದೆ. ಇದು ಸಾಮಾನ್ಯವಾಗಿ ವಿಶ್ವದೆಲ್ಲೆಡೆ ಮತಪ್ರದರ್ಶಕರ ವಿರುದ್ಧ ಬಳಸುವ ಅಶ್ರುವಾಯುವಿಗಿಂತ ತೀರಾ ಭಿನ್ನವಾದದ್ದು. ಅಂತರ್ರಾಷ್ಟ್ರೀಯವಾಗಿ ನಿಷೇಧಿತವಾಗಿ ವಿಷಕಾರೀ ರಾಸಾಯನಿಕಗಳನ್ನು ಬಳಸಿ ಇದನ್ನು ತಯಾರಿಸಲಾಗುತ್ತಿದೆ. ಮೊದಲ 10ತಿಂಗಳ ಪ್ಯಾಲೆಸ್ಟೈನ್ ದಂಗೆಗಳಲ್ಲಿ ಇಸ್ರೇಲೀ ಪಡೆಗಳಿಗೆ ಬಲಿಯಾದ ಪ್ಯಾಲೆಸ್ಟೈನೀಯರಲ್ಲಿ 15 % ವಿಷಾನಿಲಗಳಿಗೆ ಬಲಿಯಾದರು. ವಿಷವಾಯು ಪ್ರಯೋಗ ದಿಂದಾಗಿ 35 00 ಭಯಾನಕ ಗರ್ಭಪಾತಗಳಾಗಿವೆ ಎಂದೂ ತಿಳಿದುಬಂದಿದೆ. ಈ ವಿಷವಾಯುಗಳಿಂದ ಇನ್ನೂ ಹಲವು ಭಯಾನಕ ದುಷ್ಪರಿಣಾಮಗಳಾಗುತ್ತವೆ ಎಂದು ಪರಿಣತರು ಅಭಿಪ್ರಾಯಪಟ್ಟಿದ್ದಾರೆ.

ವಿಯೆಟ್ನಾಮ್, ಲಾವೋಸ್, ಕಂಪೂಚಿಯಾ ಜಂಟಿ ಘೋಷಣೆ

ಏಪ್ರಿಲ್ 5 ರಂದು ಕಂಪೂಚಿಯಾ, ಲಾವೋಸ್ ಹಾಗೂ ವಿಯೆಟ್ನಾಂ ಸರ್ಕಾರಗಳು ಒಂದು ಜಂಟಿ ಘೋಷಣೆಯನ್ನು ಜ್ಯಾರಿ ಮಾಡಿದವು. ಇದರ ಪ್ರಕಾರ ಸೆಪ್ಟೆಂಬರ್ 1989 ರೊಳಗೆ ವಿಯೆಟ್ನಾಂ ಕಂಪೂಚಿಯಾದಿಂದ ತನ್ನೆಲ್ಲಾ ಪಡೆಗಳನ್ನು ವಾಪಾಸು ಪಡೆಯುವುದು.

ಇದರೊಂದಿಗೆ ಈಗಾಗಲೇ ಮಾಡಿರುವ ನಿರ್ಣಯಗಳು ಹಾಗೂ ಕೊಟ್ಟ ವಚನಗಳ ಪ್ರಕಾರ ಕಂಪೂಚಿಯಾದ ಎಲ್ಲಾ ಪಕ್ಷಗಳಿಗೂ ವಿದೇಶೀ ಮಿಲಿಟರಿ ನೆರವು, ವಿದೇಶೀ ಹಸ್ತಕ್ಷೇಪ ಸೆಪ್ಟೆಂಬರ್ ಅಂತ್ಯದೊಳಗೆ ನಿಲ್ಲಬೇಕೆಂದು ಘೋಷಣೆ ಹೇಳಿದೆ. ಇದು ಜ್ಯಾರಿಯಾಗದಿದ್ದರೆ, ಮುಖ್ಯವಾಗಿ ಏಪ್ರಿಲ್ 1975 ರಿಂದ ಜನವರಿ 1979ರ ನಡುವೆ 30 ಲಕ್ಷ ಕಂಪೂಚಿಯನ್ನರ ಹತ್ಯೆಗೈದ ಪೋಲ್‌ಪೋಟ್ ಕೂಟಕ್ಕೆ ಮಿಲಿಟರಿ ನೆರವು ನಿಲ್ಲದಿದ್ದರೆ "ವಿಶ್ವಸಂಸ್ಥೆಯ ಚಾರ್ಟರ್ ಪ್ರಕಾರ ಹಾಗೂ ಅಲಿಪ್ತ ಆಂದೋಲನದ ನೀತಿಗಳಿಗೆ ಅನುಗುಣವಾಗಿ ಕಂಪೂಚಿಯಾಗೆ ಬೇಕಾದ ನೆರವನ್ನು ಇತರ ದೇಶಗಳಿಗೆ ಕರೆ ನೀಡುವ ನ್ಯಾಯಬದ್ಧ ಹಕ್ಕನ್ನು ಕಂಪೂಚಿಯಾ ಕಾದಿರಿಸಿಕೊಳ್ಳುತ್ತದೆ ಎಂದು ಘೋಷಣೆ ತಿಳಿಸಿದೆ.

ಕ್ಯೂಬಾದ ಮೂರು ದಶಕಗಳ ಅನುಭವ ಇಡೀ ವಿಶ್ವಕ್ಕೊಂದು ವಿಶಿಷ್ಟ ಮಾದರಿ-ಗೊರ್ಬಚೆವ್

ಏಪ್ರಿಲ್ ತಿಂಗಳ ಆರಂಭದಲ್ಲಿ ಸೋವಿಯತ್ ಮುಖಂಡ ಮಿಖಾಯಿಲ್ ಗೊರ್ಬಚೆವ್‌ರವರ ಕ್ಯೂಬಾ ಭೇಟಿ ಪಾಶ್ಚಿಮಾತ್ಯ ಪತ್ರಿಕೆಗಳ ಊಹಾಪೋಹಗಳನ್ನೆಲ್ಲಾ ತಣ್ಣಗಾಗಿಸಿದೆ. ಅವರೆಲ್ಲಾ ಪೆಚ್ಚುಮೋರೆ ಹಾಕಿಕೊಳ್ಳುವಂತೆ ಮಾಡಿದೆ.

ಅರ್ಮೇನಿಯಾದ ಭೂಕಂಪದಿಂದಾಗಿ ಈ ಭೇಟಿಯನ್ನು ಮುಂದೂಡಲಾಗಿತ್ತು. ಭೂಕಂಪದ ಸುದ್ದಿ ಬಂದಾಗ ಎಲ್ಲಕ್ಕೂ ಮೊದಲು ನೆರವಿಗೆ ಧಾವಿಸಿದವರು ಕ್ಯೂಬಾದ ಜನತೆ. ನಿಜವಾಗಿಯೂ ರಕ್ತವನ್ನೇ ಧಾರೆಯೆರೆದರು ಅವರು ಎಂದು ಗೊರ್ಬಚೆವ್ ಸೋವಿಯತ್ ಜನತೆಯ ಮನದುಂಬಿದ ಕೃತಜ್ಞತೆಯನ್ನು ಕ್ಯೂಬಾದ ರಾಷ್ಟ್ರೀಯ ಅಸೆಂಬ್ಲಿಯನ್ನುದ್ದೇಶಿಸಿ ಮಾತನಾಡುತ್ತಾ ವ್ಯಕ್ತಪಡಿಸಿದರು.

ಕ್ಯೂಬಾವನ್ನು ಸ್ವಾತಂತ್ರ್ಯ ದ್ವೀಪವೆಂದು ಕರೆದ ಗೊರ್ಬಚೆವ್ ಕ್ಯೂಬಾದ ಜನತೆ ಹೇಗೆ ಕ್ರಾಂತಿಯತ್ತ ನಡೆದರು, ಸಶಸ್ತ್ರ ಹಸ್ತಕ್ಷೇಪವನ್ನು ಹಿಮ್ಮೆಟ್ಟಿಸಲು, ಹೊರಗಿನ ಸತತ ಹಾಗೂ ಭೀಷಣ ಒತ್ತಡವನ್ನು ಎದುರಿಸಲು ಅವರಿಗೆ ಹೇಗೆ ಸಾಧ್ಯವಾಯಿತು ಎಂಬುದು ಸೋವಿಯತ್ ಜನತೆಗೆ ಚೆನ್ನಾಗಿ ತಿಳಿದಿದೆ ಎಂದರು. ಉಚ್ಚ ಮಾನವೀಯ ಆದರ್ಶಗಳಿಗೆ, ಸಮಾಜವಾದಕ್ಕೆ ಬದ್ಧವಾದ ಪಕ್ಷವೊಂದರ ನೇತೃತ್ವದಿಂದಾಗಿ, 20ನೇ ಶತಮಾನದ ಅತ್ಯಂತ ಪ್ರಸಿದ್ಧ ಕ್ರಾಂತಿಕಾರಿ ಮುಖಂಡ, ದಂತಕತೆಯ ಪರಿಮಾಣದ ವ್ಯಕ್ತಿ ಕಾ॥ ಫಿಡೆಲ್‌ರವರ ನೇತೃತ್ವದಿಂದಾಗಿ ಇದು ಸಾಧ್ಯವಾಯಿತು ಎಂದು ಅವರು ಮನದುಂಬಿ ಹೇಳಿದರು.

195 0ರ ದಶಕದ ನಿರುತ್ಸಾಹಕಾರೀ ವಾತಾವರಣದಲ್ಲಿ, ಪ್ರತಿಗಾಮಿ ಶಕ್ತಿಗಳು ಸಾಮಾಜಿಕ ಪ್ರಗತಿಯನ್ನು ನಿಲ್ಲಿಸಲು ರಾಷ್ಟ್ರೀಯ ವಿಮೋಚನಾ ಆಂದೋಲನಗಳ ಕತ್ತು ಹಿಸುಕಲು, ಸರ್ವಾಧಿಕಾರೀ ಆಡಳಿತಗಳನ್ನು ರಕ್ಷಿಸಲು ಸರ್ವ ಪ್ರಯತ್ನ ನಡೆಸುತ್ತಿದ್ದಾಗ ನಿಮ್ಮ ಕ್ರಾಂತಿ ವಿಶ್ವ ಸಾರ್ವಜನಿಕ ಅಭಿಪ್ರಾಯದ ಮೇಲೆ ಅಪಾರ ನೈತಿಕ ಪರಿಣಾಮ ಬೀರಿತು ಎಂದ ಗೊರ್ಬಚೆವ್ ಕ್ಯೂಬಾ ಜನತೆಯ ಸುಪ್ರಸಿದ್ಧ ಅಂತರ್ರಾಷ್ಟ್ರೀಯ ಪ್ರಜ್ಞೆಯನ್ನು ನೆನೆಪಿಸಿಕೊಂಡರು.

ಮುಂದುವರಿದು ಹೇಳುತ್ತಾ ಅವರು "ನಿಮ್ಮ ದಾರಿ ಸುಗಮವೇನೂ ಆಗಿರಲಿಲ್ಲ. ನೀವು ಅತ್ಯಂತ ದುರ್ಗಮ ಪರಿಸ್ಥಿತಿಗಳಲ್ಲಿ ಒಂದು ಕೈಯಲ್ಲಿ ಸುತ್ತಿಗೆ ಹಿಡಿದು, ಇನ್ನೊಂದು ಕೈಯಲ್ಲಿ ಬಂದೂಕು ಹಿಡಿದು ದುಡಿಯ ಬೇಕಾಗಿತ್ತು. ಆದರೆ ಇಂತಹ ಸನ್ನಿವೇಶದಲ್ಲೂ ಕ್ರಾಂತಿಯ ಮಾನವೀಯ ನೆಲೆಗಳು ಚೆನ್ನಾಗಿ ಪ್ರಕಟಗೊಂಡವು-ನಿಮ್ಮಲ್ಲಿದ್ದದ್ದನ್ನೆಲ್ಲಾ ಮೊದಲು ಮಕ್ಕಳಿಗಾಗಿ, ಯುವಕರಿಗಾಗಿ, ಸಾರ್ವಜನಿಕ ಶಿಕ್ಷಣ ಹಾಗೂ ಆರೋಗ್ಯಕ್ಕಾಗಿ ಮುಡಿಪಿಟ್ಟಿರಿ. ಇದು ಮತ್ತು ಇಂತಹ ಇತರ ಲಕ್ಷಣಗಳಿಂದಾಗಿ ಕ್ಯೂಬಾದ ಅನುಭವ ಸಮಾಜವಾದೀ ರಚನೆಯ ಜಾಗತಿಕ ಅನುಭವದ ಒಂದು ಅತ್ಯಂತ ಮೌಲಿಕ ಹಾಗೂ ಮಹತ್ವದ ಭಾಗವಾಯಿತು" ಎಂದು ಶ್ಲಾಘಿಸಿದರು. [illegible]

ತಮ್ಮ ದೇಶದಲ್ಲಿನ ವ್ಯಾಪಕ ಸುಧಾರಣೆಗಳ ಬಗ್ಗೆ ಕಾ॥ ಗೊರ್ಬಚೆವ್ ಕ್ಯೂಬಾದ ರಾಷ್ಟ್ರೀಯ ಅಸೆಂಬ್ಲಿಯನ್ನುದ್ದೇಶಿಸಿ ಮಾಡಿದ ಈ ಭಾಷಣದಲ್ಲಿ ವಿವರಿಸಿದರು. "ನಾನು ಮತ್ತು ಫಿಡೆಲ್ ಈ ಎರಡು ದಿನ ವಿಶ್ವದ, ಸಮಾಜವಾದದ ಭವಿಷ್ಯದ ಬಗ್ಗೆ ವಿಸ್ತಾರವಾಗಿ ಚರ್ಚಿಸಿದೆವು" ಎಂದು ಹೇಳಿದ ಅವರು "ಸಮಾಜವಾದದ ಆಂತರಿಕ ಸಾಮರ್ಥ್ಯ ಅಸೀಮಿತ ಆದರೆ ಅದು ತಂತಾನೇ ಪ್ರಕಟಗೊಳ್ಳುವುದಿಲ್ಲ. ಪ್ರತಿಯೊಂದು ಚಾರಿತ್ರಿಕ ಘಟ್ಟದಲ್ಲಿ ಅಭಿವೃದ್ಧಿಯ ಗತಿತಾರ್ಕಿಕತೆಯನ್ನು ಅರ್ಥಮಾಡಿಕೊಳ್ಳಲು, ಸಮಯದ ಅವಶ್ಯಕತೆಗಳಿಗನುಗುಣವಾಗಿ ಧೋರಣೆಗಳನ್ನು ರೂಪಿಸಲು ವಾಸ್ತವತೆಯ ಬಗ್ಗೆ ಸೃಜನಶೀಲ ಪುನಃ ಚಿಂತನೆಯಲ್ಲಿ ತೊಡಗುವುದು ಅತ್ಯಗತ್ಯ. ಇದು ಸ್ವಂತ ಅನುಭವದಿಂದ ನಾವು ಕಲಿತ ಪಾಠ" ಎಂದರು.

ಇದು ಗೊರ್ಬಚೆವ್‌ರವರ ಮೊತ್ತ ಮೊದಲ ಕ್ಯೂಬಾ ಭೇಟಿಯಾಗಿತ್ತು. ಎರಡು ದಿನಗಳ ಭೇಟಿಯ ಕಾಲದಲ್ಲಿ ಫಿಡೆಲ್ ಕಾಸ್ಟ್ರೋರವರ ಜತೆಗೆ ವ್ಯಾಪಕ ಮಾತುಕತೆಗಳ ನಂತರ "ಈಗಾಗಲೇ ಸಮಯದ ಒರೆಗಲ್ಲಿನಲ್ಲಿ ಸಾಬೀತಾದ ಸೋವಿಯತ್-ಕ್ಯೂಬಾ ಸಂಬಂಧಗಳನ್ನು ಇನ್ನಷ್ಟು ಬಲಗೊಳಿಸುವ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರದ ಹೊಸ ದಿಗಂತಗಳನ್ನು ತೆರೆಯಬಲ್ಲ" 25 ವರ್ಷಗಳ ಸ್ನೇಹ ಸಂಧಿಗೆ ಸಹಿ ಹಾಕಲಾಯಿತು.

ಪ್ರಜಾಸತ್ತೆಯ ಮೇಲೆ ಆಘಾತ

★ ಪುಟ 1ರಿಂದ

ಕಂಡರೆ ಅದರಲ್ಲಿ ಆಶ್ಚರ್ಯದ ಸಂಗತಿಯೇನಿಲ್ಲ.

ಕರ್ನಾಟಕದ ರಾಜ್ಯಪಾಲರು ಇಲ್ಲಿ ಜನತಾಪಕ್ಷ ಸರ್ಕಾರ ಜನತಾದಳ ಸರ್ಕಾರವಾಗಿ ಮಾರ್ಪಟ್ಟಿದ್ದನ್ನು ಒಪ್ಪಬಾರದು ಅದರ ವಿನಂತಿಯ ಮೇಲೆ ವಿಧಾನಸಭೆಯನ್ನು ಕರೆಯಬಾರದು ಎನ್ನುವ ಹಿನ್ನಲೆಯಲ್ಲಿ ಕಾಂಗ್ರೆಪಕ್ಷದಲ್ಲಿ- ರಾಜ್ಯ ಮಟ್ಟದಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಮೂಡಿದ ಅಸಮಾಧಾನ ಅದರಲ್ಲಿಯೂ ಕೇಂದ್ರ ಸರ್ಕಾರದ ಮಂತ್ರಿಗಳೇ ವೆಂಕಟಸುಬ್ಬಯ್ಯನವರು ಈ ಸದವಕಾಶವನ್ನು ಜನತಾದಳಕ್ಕೆ ಕಾಟ ಕೊಡಲು ಅವರ ಸರ್ಕಾರವನ್ನು ಕಿತ್ತೊಗೆಯಲು ಉಪಯೋಗಿಸಿಕೊಳ್ಳಲಿಲ್ಲ ಎಂದು ಬಹಿರಂಗವಾಗಿಯೇ ಅಭಿಪ್ರಾಯವ್ಯಕ್ತಪಡಿಸಿದ್ದು ಕೊನೆಗೆ ವೆಂಕಟಸುಬ್ಬಯ್ಯ ಬೇಕಾದರೆ ನನ್ನ ರಾಜೀನಾಮೆ ತೆಗೆದುಕೊಳ್ಳಿ ಎಂದು ಪ್ರತಿಕ್ರಿಯಿಸಬೇಕಾಗಿ ಬಂದಿದ್ದು ನಂತರ ದೆಹಲಿಯ ಕರೆಯ ಮೇರೆಗೆ ರಾಜೀವ್‌ಗಾಂಧಿಯವರನ್ನು ಇತರವರಿಷ್ಠರನ್ನು ಭೇಟಿಯಾದುದ್ದು ಜನರ ಮನಸ್ಸಿನಲ್ಲಿ ಹಸಿರಾಗಿರುವ ವಿಷಯ. ಈ ಭೇಟಿಯ ಸಂದರ್ಭದಲ್ಲಿ ನಡೆದದ್ದೇನು ? ರಾಜೀನಾಮೆ ನೀಡಿದ್ದರೂ ರಾಜ್ಯಪಾಲರಾಗಿಯೇ ಇರುವ ವೆಂಕಟಸುಬ್ಬಯ್ಯನವರ ಮುಂದುವರಿಕೆಯ ಗುಟ್ಟೇನು ? ಮತ್ತೊಂದು ಅವಕಾಶಕ್ಕಾಗಿ, ಅದೆಂತಹ ಸಣ್ಣ ಅವಕಾಶವಾದರೂ ಸರಿ ಮರೆಯಲ್ಲಿ ಹೊಂಚುಹಾಕಿ, ಕಾದು ಕುಳಿತು ಗಬಕ್ಕೆಂದು ಕುತ್ತಿಗೆಗೇ ಬಾಯಿ ಹಾಕಿದ್ದರೆನ್ನುವುದು ನಿಚ್ಚಳವಾದ ವಿಷಯ. ಸಂವಿಧಾನ ಬದ್ಧವಾಗಿ ನಡೆಯಲಿಚ್ಛಿಸುವ ಯಾವುದೇ ಮಾನವಂತ ರಾಜ್ಯಪಾಲರನ್ನು ತಾವು ಕಾಂಗ್ರೆಯ ಸರ್ವಾಧಿಕಾರಿಯಂತ್ರದಲ್ಲಿ ಬಿಡವು ಎಂಬ ಪೈಶಾಚಿಕ ಭಾವನೆಯೂ ಇದರಲ್ಲಿ ಕಾಣಿಸುತ್ತದೆ. ಪ್ರಜಾಸತ್ತೆ ನಮ್ಮ ಅಡಿಯಾಳಾಗಿರುವವರೆಗೆ ಮಾತ್ರ ನಾವು ಪ್ರಜಾಪ್ರಭುತ್ವವಾದಿಗಳು ಅದೇ ಪ್ರಜಾಸತ್ತೆ ಜನರಿಗೆ ಉಪಯುಕ್ತವಾಗಿ ನಮಗೆ ವಿರುದ್ಧವಾಗಿ ತಿರುಗಿದರೆ ಪ್ರಜಾಸತ್ತೆಯ ಕತ್ತಿಗೆ ಕೈ ಹಾಕುವುದರಲ್ಲಿ ನಾವೇ ಮೊದಲಿಗರು ಎಂದು ಗುತ್ತೇದಾರಿ ಬಂಡವಾಳಶಾಹಿ ಭೂಮಾಲಿಕ ವರ್ಗದ ಅತ್ಯಂತ ಕ್ರೂರ ವಿಭಾಗ ಈ ಮೂಲಕ ಸಾರಿ ಹೇಳಿದೆ.

ಕಾರ್ಮಿಕ ವರ್ಗದ, ದುಡಿಯುವ ವರ್ಗದ ಪಕ್ಷಗಳಂತಿರಲಿ, ತಮ್ಮಂತಹದೇ ಗುತ್ತೇದಾರಿ ಭೂಮಾಲಿಕ ಬಂಡವಾಳಶಾಹಿ ಪಕ್ಷವೊಂದರ ಆಡಳಿತವನ್ನು ಸಹಿಸದ, ಏಕ ಪಕ್ಷ ಸರ್ವಾಧಿಕಾರ ಹೇರುವ ದಾರಿಯಲ್ಲಿ ಮತ್ತೊಂದು ಹೆಜ್ಜೆಯಿದು. ರಾಷ್ಟ್ರದ ಜನತೆಯ ಮುಂದೆ, ಎಡಪಕ್ಷಗಳ ಬೆಂಬಲ ಪಡೆದ ರಾಷ್ಟ್ರೀಯ ರಂಗ-ಅದರ ಕೇಂದ್ರವಾದ ಜನತಾದಳ ಹಿಂದೀ ಪ್ರದೇಶದಲ್ಲಿ ಜನರ ಕಣ್ಣು ಸೆಳೆಯತೊಡಗಿದೆ. ಕಾಂಗ್ರೆಗೆ ಒಂದು ಸಮರ್ಥ ಪರ್ಯಾಯವಾಗಿರೂಪುಗೊಳ್ಳತೊಡಗಿದೆ. ನಮಗೆ ಕುತ್ತಾಗಲಿದೆ ಎಂಬುದು ನಿರಂತರವಾಗಿ ಜನತಾದಳ ಸರ್ಕಾರದ ಮೇಲೆ ನಡೆದ ಅಪಪ್ರಚಾರದ ಸುರಿಮಳೆಗೆ ಹಾಗೂ ನಿರಂತರವಾಗಿ ಬೂಟಾಸಿಂಗ್‌ರವರ ನೇರ ನಿರ್ದೇಶನದಲ್ಲಿ ನಡೆದ ಷಡ್ಯಂತ್ರಗಳಿಗೆ ಕಾರಣ ಹಾಗು ಈಗ ರಾಜ್ಯಪಾಲರ ಮೂಲಕ ನಡೆಸಿದ ಈ ದುರ್ಧರ ಕ್ರಮಕ್ಕೆ ಕಾರಣ.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಜನತಾದಳ ಮುಖ್ಯವಾಗಿ ಜನರ ಮುಂದೆ ಬಂದು ನಿಂತಾಗ 1979ರಲ್ಲಿ ಜನತಾ ಪಕ್ಷದ ಉರುಳಿಬಿದ್ದುದ್ದನ್ನು ಮತ್ತೆ ಜನರಿಗೆ ನೆನಪಿಸಿ ಮತ್ತೆ ಇದೇ ಗತಿಯಾಗುತ್ತದೆ ಎಂದು ಹೇಳಲು ನಿರಂತರವಾಗಿ ಯತ್ನನಡೆಸಿ ಕೊನೆಗೂ ಪ್ರಜಾತಂತ್ರದ ಕೊಲೆ ನಡೆಸಿಯೇ ಜನತಾದಳ ಸರ್ಕಾರವನ್ನು ಉರುಳಿಸಿತು.

ಆದರೆ ಬಿಹಾರದಲ್ಲಿ ನಡೆದದ್ದೇನು? ರಾಜಸ್ಥಾನದಲ್ಲಿ, ಮಧ್ಯಪ್ರದೇಶದಲ್ಲಿ, ಮಹಾರಾಷ್ಟ್ರದಲ್ಲಿ ನಡೆಯುತ್ತಿರುವುದೇನು? ಕೇವಲ ಪಕ್ಷಾಂತರ ನಿಷೇಧ ಮಸೂದೆಯೊಂದೇ ಅವರನ್ನು ರಕ್ಷಿಸುತ್ತಿದೆ. ಅಲ್ಲಿ ನಡೆಯುತ್ತಿರುವ ಶಾಸಕರನ್ನು ಪ್ರಲೋಭನೆಗೊಡ್ಡುವ ಆಟಗಳಿಗೆ ಕೊನೆಮೊದಲಿದೆಯೇ? ಬಿಹಾರದಲ್ಲಿ ಬಜೆಟ್ ಕೂಡ ಮಂಡಿತವಾಗಲಾರದಂತೆ ಮುಖ್ಯಮಂತ್ರಿ ಶಾಸನಸಭೆಯನ್ನೇ ಎದುರಿಸಲಾಗದಂತೆ ಆದದ್ದನ್ನು ಜನ ಮರೆಯಲು ಸಾಧ್ಯವೆ? ಇಂತಹ ಸಂವಿಧಾನಿಕ ಬಿಕ್ಕಟ್ಟಿನ ಸ್ಥಿತಿಯ ಬಗ್ಗೆ ಅಲ್ಲಿನ ರಾಜ್ಯಪಾಲರು ವರದಿ ಮಾಡಲು ಏಕೆ ಮುಂದಾಗಲಿಲ್ಲ? ರಾಜ್ಯಪಾಲರ ನಿವಾಸದಲ್ಲಿಯೇ ವಾರಗಟ್ಟಲೆ ಬಿಡಾರಹೂಡಿ ಚೌಕಾಸಿ ನಡೆಸಿದ ಬೂಟಾಸಿಂಗರು ಅವರ ಜೊತೆಯ ಕೇಂದ್ರ ಮಂತ್ರಿಗಳು ಅಡ್ಡಿಯಾಗಿದ್ದರೆ?

ಕರ್ನಾಟಕದ ರಾಷ್ಟ್ರಪತಿಗಳ ಆಡಳಿತ ಮುಂದಿನ ಚುನಾವಣೆಯಲ್ಲಿ ಸರ್ವಾಧಿಕಾರಿ ಶಕ್ತಿಗಳ ಸಮರದ ತೀವ್ರತೆ ಬಗ್ಗೆ ನೀಡಿದ ಮುನ್ನೆಚ್ಚರಿಕೆ. ಸರ್ವಾಧಿಕಾರಿ ಶಕ್ತಿಗಳು ಆಡಳಿತದ ಮೇಲಿನ ಹತೋಟಿಯನ್ನು ಯಾವ ಕಾರಣಕ್ಕು ಬಿಟ್ಟುಕೊಡಬಯಸುವುದಿಲ್ಲ ಎಂಬುದನ್ನು ಎಲ್ಲಾ ಜಾತ್ಯಾತೀತ ವಿರೋಧ ಪಕ್ಷಗಳು ಮನಗಾಣಬೇಕು. ಈ ಮುನ್ನೆಚ್ಚರಿಕೆಯನ್ನು ಸವಾಲಾಗಿ ತೆಗೆದುಕೊಂಡು ಭಾರತಾದ್ಯಂತ ಕಾರ್ಯಕ್ರಮ ಬದ್ಧ ಚಳುವಳಿಗೆ ತೊಡಗದೇ ಯಾವ ಶಾರ್ಟ್‌ಕಟ್ ವಿಧಾನವೂ ಇಲ್ಲ ಎಂಬುದನ್ನು ಮನಗಾಣಬೇಕು.

ಅಖಿಲ ಭಾರತ ಭೂಸುಧಾರಣಾ ಸಮಾವೇಶದ ಒಕ್ಕೊರಲಿನ ಉದ್ಗಾರ.

★ ಪುಟ 1ರಿಂದ

ಹಿಂದಿಯಲ್ಲಿ ಮಾತನಾಡಿದ ಕಾಂ. ಸುರಜೀತ್‌ರವರು ಇದು ಕೇವಲ ಕೆಲವು ವಿಚಾರಗಳನ್ನು ಪ್ರಚಾರಮಾಡಲೆಂದು ಕೂಡಿದ ಸಮಾವೇಶವಲ್ಲ. ನೇರ ಕ್ರಮದ ನಿರ್ಧಾರಕ್ಕಾಗಿ ಸೇರಿದ ಸಮಾವೇಶ. "ಸಂಘರ್ಷ್‌ಕಾ ಸಮ್ಮೇಲನ್ " ಎಂದು ಘೋಷಿಸಿದರು. ಸಿ.ಪಿ.ಐ. (ಎಂ) ಪರವಾಗಿ ಮಾತನಾಡಿದ ಪಾಲಿಟ್ ಬ್ಯೂರೋ ಸದಸ್ಯ ಕಾಂ ಬಿ.ಟಿ.ಆರ್.ರವರು.ಈ ಹೋರಾಟ ಭಾರತದ ಸ್ವರೂಪವನ್ನು ಸಂಪೂರ್ಣವಾಗಿ ಬದಲು ಮಾಡುವ ಹೋರಾಟ ಗ್ರಾಮಾಂತರ ಪ್ರದೇಶಗಳ ವರ್ಗ ಶಕ್ತಿ ಸಮೀಕರಣವನ್ನು ಬದಲಾಯಿಸುವ ಹೋರಾಟ. ಭೂಮಿಯ ಪ್ರಶ್ನೆಗಾಗಿ ಭಾರತದಾದ್ಯಂತ ಹೋರಾಟಗಳು ಹಬ್ಬಿ ಹರಡಲು ಸಾಧ್ಯವಾದರೆ ಭಾರತ ಹಿಂದಿನ ಭಾರತವಾಗಿ ಉಳಿಯಲು ಸಾಧ್ಯವಿಲ್ಲ ಎಂದರು.



ಭಾರತದ ಕಾರ್ಷಿಕ ಪ್ರಶ್ನೆಯ ಕೇಂದ್ರವಾದ, ಭೂ ಸಮಾವೇಶದಲ್ಲಿ ಮಾತನಾಡಿದ ಎಡ ರೈತ ಹಾಗು ಕೃಷಿ ಕಾರ್ಮಿಕ ಸಂಘಟನೆಯ ನಾಯಕರೆಲ್ಲರು ಈ ಮಾತನ್ನು ಒತ್ತಿ ಹೇಳಿದರು. ಎಲ್ಲ ಪ್ರದೇಶಗಳಲ್ಲಿಯು ತೀವ್ರ ಹೋರಾಟದ ಕಾರ್ಯಕ್ರಮಗಳನ್ನು ರೂಪಿಸಲು ಕರೆನೀಡಿದರು.

ಪಶ್ಚಿಮ ಬಂಗಾಳ , ಕೇರಳ , ಹಾಗೂ ತ್ರಿಪುರಾಗಳಲ್ಲಿ ರೈತ ಚಳುವಳಿ ಹಾಗೂ ಅಲ್ಲಿನ ಎಡ ರಂಗ ಸರ್ಕಾರಗಳು ಭೂ ಹಂಚಿಕೆಯಲ್ಲಿ ಸಾಧಿಸಿದ ಯಶಸ್ಸು ಮತ್ತೆ ಮತ್ತೆ ಪ್ರಶಂಸೆಗೆ ಒಳಗಾದುವು.

ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿಗಳಲ್ಲೊಬ್ಬರಾದ ಕಾಂ.ಡಾ.ಬಿಪ್ಲಬ್ ದಾಸ್‌ಗುಪ್ತಾ ಪಶ್ಚಿಮ ಬಂಗಾಳದ ಅನುಭವವನ್ನು ವರ್ಣಿಸಿದರು.

ವಿವಿಧ ರಾಜ್ಯಗಳ ಪ್ರತಿನಿಧಿಗಳು ತಮ್ಮ ತಮ್ಮ ರಾಜ್ಯಗಳಲ್ಲಿ ಭೂ ಸುಧಾರಣಾ ಕಾನೂನು ಜಾರಿಗೆ ಬಂದಿರುವ ರೀತಿಯನ್ನು ಭೂಮಾಲೀಕರ ಆಟಾಟೋಪಗಳನ್ನು ಹಾಗೂ ಅದರ ವಿರುದ್ಧ ನಡೆದಿರುವ ಹೋರಾಟದ ಸ್ವರೂಪವನ್ನು ಮನಗಾಣುವಂತೆ ಚಿತ್ರಿಸಿದರು. ಬಿಹಾರ, ಉತ್ತರಪ್ರದೇಶ , ರಾಜಸ್ಥಾನ್, ಮಧ್ಯಪ್ರದೇಶ ಮೊದಲಾದ ರಾಜ್ಯಗಳ ಪ್ರತಿನಿಧಿಗಳು ಅಲ್ಲಿ ಪಾಳೆಯಗಾರಿ ಹಿಡಿತದ ಭಯಾನಕ ಪರಿಸ್ಥಿತಿಯನ್ನು ಬಿಹಾರದ ಜಗನ್ನಾಥ ಮಿಶ್ರಾ ಮೊದಲಾದ ಕಾಂಗ್ರೆ ನಾಯಕರ ಮುಷ್ಟಿಯಲ್ಲಿ ಸಿಲುಕಿರುವ ನೂರಾರು ಹಳ್ಳಿಗಳಲ್ಲಿನ ರೈತರ ಸಂಕಟವನ್ನು ವಿವರಿಸಿದರೆ, ಪಂಜಾಬ್ ಅಸ್ಸಾಂಗಳ ರೈತರು ವಿದೇಶಿ ಶಕ್ತಿಗಳು ಭಯೋತ್ಪಾದಕರು, ವಿಚ್ಛಿದ್ರಕಾರಿಗಳು ಭೂಮಿಯ ಬಗ್ಗೆ ನಡೆಸಿರುವ ದಾಂಧಲೆಯನ್ನು ವರ್ಣಿಸಿದರು.

ಕರ್ನಾಟಕದ ಕೃಷಿಕೂಲಿಕಾರ ಸಂಘ ಹಾಗು ರೈತ ಸಂಘವನ್ನು ಪ್ರತಿನಿಧಿಸಿ 8ಜನರು ಈ ಸಮಾವೇಶದಲ್ಲಿ ಭಾಗವಹಿಸಿದರು. ಕೃಷಿ ಕೂಲಿಕಾರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕಾಂ.ಜಿ.ವಿ. ಶ್ರೀ ರಾಮ ರೆಡ್ಡಿ ಹಾಗೂ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್‌ಬಾಳೆ, ಕಾಂ.ಆರ್ ವೆಂಕಟರಾಮಯ್ಯ, (ಶಾಸಕರು)

ಭೀಮಸಿ ಕಲಾದಗಿ, ಎಂ.ಎಸ್.ಉಗ್ರಪ್ಪ, ಜಿ.ಎನ್ ನಾಗರಾಜ್, ಡೇವಿಡ್ ಕರ್ಕಡ, ಹಾಗೂ ರಾಮಭದ್ರಯ್ಯ - ಇವರೇ ಸಮಾವೇಶದಲ್ಲಿ ಭಾಗವಹಿಸಿದ ಪ್ರತಿನಿಧಿಗಳು.

ಕರ್ನಾಟಕದ ಪರವಾಗಿ ಕಾಂ. ವೆಂಕಟರಾಮಯ್ಯನವರು ಚರ್ಚೆಯಲ್ಲಿ ಪಾಲ್ಗೊಂಡರು.

ಕಂಟ್ರಾಕ್ಟ್ ಪದ್ಧತಿ ರದ್ಧತಿ ಒತ್ತಾಯಿಸಿ ಬೀಡಿ ಕಾರ್ಮಿಕರ ಮುಷ್ಕರ

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ ಕರ್ನಾಟಕ ರಾಜ್ಯ ಸಮಿತಿ ಮಾರ್ಚ್ 18ರಂದು ರಾಜ್ಯದಾದ್ಯಂತ ಬೀಡಿ ಕೈಗಾರಿಕೆಯಲ್ಲಿರುವ ಕಂಟ್ರಾಕ್ಟ್ ಪದ್ಧತಿ ರದ್ದುಗೊಳಿಸಲು ಒತ್ತಾಯಿಸಿ ಒಂದು ದಿನದ ಮುಷ್ಕರಕ್ಕೆ ನೀಡಿದ ಕರೆಯಂತೆ ಬಂಟ್ವಾಳ ತಾಲೂಕಿನಾದ್ಯಂತ ಬೀಡಿ ಕಾರ್ಮಿಕರು ಯಶಸ್ವಿ ಮುಷ್ಕರ ನಡೆಸಿದರು.

ಬಂಟ್ವಾಳ, ಬಿ.ಸಿ.ರಸ್ತೆ, ಪಾಣೆ ಮಂಗಳೂರು, ಮೊದಲಾದೆಡೆಗಳಲ್ಲಿ ಎಲ್ಲಾ ಡಿಪೋಗಳು ಮುಚ್ಚಿದ್ದವು. ಬ್ರಾಂಚ್‌ಗಳಿಗೆ ಬೀಡಿ ನೀಡುವುದನ್ನು ಕಾರ್ಮಿಕರು ನಿಲ್ಲಿಸಿ ಪೂರ್ಣ ಬಂದ್‌ನಲ್ಲಿ ಪಾಲ್ಗೊಂಡರು. ಬಂಟ್ವಾಳದಲ್ಲಿ ನಡೆದ ಕಾರ್ಮಿಕರ ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕಾ॥ ಬಿ.ವಾಸುಗಟ್ಟಿ ಕಾರ್ಮಿಕ ನಾಯಕ ಬಿ.ಹೂವಯ್ಯನವರು ಮಾತನಾಡಿ ಸಂಘಟನೆ ಬಲಪಡಿಸಿ ಕಂಟ್ರಾಕ್ಟ್‌ದಾರರ ಅಪಪ್ರಚಾರವನ್ನು ಎದುರಿಸಿ ಐಕ್ಯತೆಯಿಂದ ಹೋರಾಡಲು ಮುಂದಾಗಬೇಕೆಂದು ಕರೆ ನೀಡಿದರು. ರಾಜ್ಯದ ಮುಖ್ಯಮಂತ್ರಿಗಳಿಗೆ ಮುಷ್ಕರದ ಕುರಿತು ತಂತಿ ಸಂದೇಶ ಕಳುಹಿಸಲಾಯಿತು.

ಪ್ರಚಾರ ಸಭೆಗಳು

ಕುಪ್ಪೆಪದವು

ರಾಯಿ ಕೆತ್ತೋಡಿ ಪ್ರದೇಶದಿಂದ ಸುಮಾರು 100 ಮಂದಿ ಬೀಡಿ ಕಾರ್ಮಿಕರು ಮೆರವಣಿಗೆ ನಡೆಸಿ ರಾಯಿಪೇಟೆಯಲ್ಲಿ ಏಪ್ರಿಲ್ 14ರಂದು ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಜಿಲ್ಲಾ ಕೋಶಾಧಿಕಾರಿ ಕಾ॥ ಜೆ.ಬಾಲಕೃಷ್ಣಶೆಟ್ಟಿ, ಕಾರ್ಯದರ್ಶಿ ಕಾ॥ ಯು.ಬಿ.ಲೋಕಯ್ಯ ಮಾತನಾಡಿ ಬೀಡಿ ಕೈಗಾರಿಕೆಯಲ್ಲಿ ಮಧ್ಯವರ್ತಿಗಳಿಂದ ಬೀಡಿ ಮಜೂರರಿಗೆ ಸಲ್ಲತಕ್ಕ ಸವಲತ್ತುಗಳು ಸಿಗದೇ ವಂಚಿತರಾಗುತ್ತಿದ್ದು ಕಂಟ್ರಾಕ್ಟ್ ಪದ್ಧತಿ ರದ್ದುಗೊಳಿಸುವುದೇ ಇದಕ್ಕಿರುವ ಪರಿಹಾರವೆಂದರು. ಕಾ॥ ಭಾಸ್ಕರ ಕೊತ್ತೊಡಿ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಕಾ॥ ವಾಸುದೇವ ಆಚಾರಿ ಸ್ವಾಗತಿಸಿ ಸದಾಶಿವದಾಸ್ ವಂದಿಸಿದರು.

ಪೂವನಿಬೆಟ್ಟು

ಮುಳಿಬೆಟ್ಟು, ಕನಲ್ತೋಡಿ, ದಡ್ಡಿ ಪ್ರದೇಶಗಳ 100ಕ್ಕೂ ಮೀರಿದ ಬೀಡಿ ಮಜೂರರು ಏಪ್ರಿಲ್ 16ರಂದು ಕಾರ್ಕಳ ತಾಲೂಕಿನ ಇರುವೈಲು ಗ್ರಾಮದ ಪೂವನಿಬೆಟ್ಟು ಪೇಟೆಯಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯಲ್ಲಿ ಕಾ॥ ಯು.ಬಿ.ಲೋಕಯ್ಯ ಮಾತನಾಡಿ ಕಮಿಷನ್ ಪದ್ಧತಿ ತೆಗೆದು ಮಾಲೀಕರೆ ನಡೆಸುವಂತಾಗಬೇಕು ಎಂದು ಹೇಳಿ ಮಾಲಕ ಮತ್ತು ಮಜೂರರಿಗೆ ನೇರ ಸಂಬಂಧವಿರಬೇಕೆಂದರು. ಕುಪ್ಪೆಪದವು ಕಾರ್ಯದರ್ಶಿ ಕಾ॥ ವಾಸುದೇವ ಆಚಾರಿ ಸ್ವಾಗತಿಸಿ ಸದಾಶಿವದಾಸ್ ವಂದಿಸಿದರು.

ಮುಚ್ಚೂರುಪೇಟೆ

ಮಂಗಳೂರು ತಾಲ್ಲೂಕಿನ ಕೊಂಪದವು, ಬುಡಿಕಾಡು, ಕಾನಪ್ರದೇಶ, ಕಾಪಿಕಾಡು ಪ್ರದೇಶಗಳ ಸುಮಾರು 15 0ಕ್ಕೂ ಮೀರಿದ ಬೀಡಿ ಕಾರ್ಮಿಕರು ಏಪ್ರಿಲ್ 15 ರಂದು ಮುಚ್ಚೂರು ಪೇಟೆಯಲ್ಲಿ ಜರುಗಿದ ಬಹಿರಂಗ ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯಲ್ಲಿ ಕಾ॥ ಯು.ಬಿ.ಲೋಕಯ್ಯನವರು ಮಾತನಾಡಿ ಮಜೂರರಿಗೆ ಬೋನಸ್ಸು, ಪ್ರಾವಿಡೆಂಡ್ ಫಂಡ್ ಸವಲತ್ತುಗಳು ಬೀಡಿ ಕೈಗಾರಿಕೆಯಲ್ಲಿರುವ ಕಮಿಷನ್ ಪದ್ಧತಿಯಿಂದಾಗಿ ದೊರೆಯದೇ ಬೀಡಿ ಕಾರ್ಮಿಕರು ವಂಚಿತರಾಗಿದ್ದಾರೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಕಂಟ್ರಾಕ್ಟ್ ಪದ್ಧತಿ ರದ್ದುಗೊಳಿಸಬೇಕೆಂದು ನಡೆಯುತ್ತಿರುವ ರಾಜ್ಯವ್ಯಾಪಿ ಮುಷ್ಕರವನ್ನು ಯಶಸ್ವಿಗೊಳಿಸಬೇಕೆಂದು ಅವರು ಕರೆ ನೀಡಿದರು. ವಾಸುದೇವ ಆಚಾರಿ, ಸದಾಶಿವದಾಸ್ ಹಾಗೂ ಬಾಬು ಶೆಟ್ಟಿ ಸಭೆಯಲ್ಲಿ ಮಾತನಾಡಿದರು.

ಡಿ.ವೈ.ಎಫ್.ಐ. ನಾಯಕನಿಗೆ ಕಾಂಗ್ರೆ ಗೂಂಡಾಗಳಿಂದ ಚೂರಿ ಇರಿತ

ಡಿ.ವೈ.ಎಫ್.ಐ. ಉರ್ವಾ ವಲಯ ಸಮಿತಿ ಅಧ್ಯಕ್ಷ, ಮಂಗಳೂರು ಬೀಡಿ ಕೆಲಸಗಾರರ ಸಂಘ (ಸಿ.ಐ.ಟಿ.ಯು.) ಜೊತೆಕಾರ್ಯದರ್ಶಿ ಹಾಗೂ ಸ್ಥಳೀಯ ಸಿ.ಪಿ.ಐ.(ಎಂ) ಶಾಖೆಯ ಕಾರ್ಯದರ್ಶಿ ಕಾ॥ ವಾಸುದೇವ ಸಾಲ್ಯನ್ ಹಾಗೂ ಡಿ.ವೈ.ಎಫ್.ಐ.ವಲಯ ಸಮಿತಿ ಸದಸ್ಯ ಮಹಮದ್‌ಆಲಿ ಅವರ ಮೇಲೆ ದಿನಾಂಕ 20-4-89ರಂದು ರಾತ್ರಿ ಸುಮಾರು 8-30 ಹೊತ್ತಿಗೆ ಕಾಂಗ್ರೆಪರ ಗೂಂಡಾಗಳು ಹಠಾತ್ತದೆ ದಾಳಿ ಮಾಡಿ ಚೂರಿಯಿಂದ ತೀವ್ರತರ ಗಾಯಗಳೊಂದಿಗೆ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ. ಈ ಅಮಾನವೀಯ ಹಲ್ಲೆಯನ್ನು ಡಿ.ವೈ.ಎಫ್.ಐ. ಉರ್ವಾ ವಲಯ ಸಮಿತಿ ತೀವ್ರವಾಗಿ ಖಂಡಿಸಿದೆ. ಹಾಗೂ ಸದ್ರಿ ಗಾಯಾಳುಗಳನ್ನು ಮಂಗಳೂರು ಸರ್ಕಾರಿ ವೆನಲಾಕ್ ಆಸ್ಪತ್ರೆಗೆ ಒಳ ರೋಗಿಯಾಗಿ ದಾಖಲು ಮಾಡಲು ನಿರಾಕರಿಸಿದ ಡಾಕ್ಟರರನ್ನು ಕೆಲಸದಿಂದ ವಜಾಗೊಳಿಸಬೇಕೆಂದು ಡಿ.ವೈ.ಎಫ್.ಐ. ಆಗ್ರಹಪಡಿಸಿದೆ. ಗೂಂಡಾ ಹಲ್ಲೆಯನ್ನು ವಿರೋಧಿಸಿ ಹಾಗೂ ಡಾಕ್ಟರ ಬೇಜಾವಾಬ್ದಾರಿ ವರ್ತನೆಯನ್ನು ವಿರೋಧಿಸಿ ಸಿ.ಐ.ಟಿ.ಯು. ನೇತೃತ್ವದಲ್ಲಿ 20-4-89ರಂದು ನಡೆಯಲಿರುವ ಮೆರವಣಿಗೆಗೆ ಡಿ.ವೈ.ಎಫ್.ಐ. ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಕೆಲವು ದಿನಗಳ ಹಿಂದೆ ಸರ್ಕಾರಿ ಜಾಗದಲ್ಲಿ ವಾಸಿಸುತ್ತಿರುವ ಬಡ ಕೃಷಿಕರ ಕುಟುಂಬಗಳ ಜಾಗವನ್ನು ಸ್ಥಳೀಯ ಭೂಮಾಲಿಕ ಶಾಲಿನ್‌ಶೆಟ್ಟಿ ಆಕ್ರಮಿಸಿದಾಗ ರೈತಸಂಘ, ಡಿ.ವೈ.ಎಫ್.ಐ. ಸದಸ್ಯರು ಪುನರ್ ಆಕ್ರಮಿಸಿ ಕೆಡವಿದ ಮನೆಗಳನ್ನು ಕಟ್ಟಿಕೊಟ್ಟಿರುವ ಕಾರಣಕ್ಕಾಗಿಯೇ ಭೂಮಾಲೀಕರು ಗೂಂಡಾ ಹಲ್ಲೆಯನ್ನು ನಡೆಸುತ್ತಿದ್ದು, ಈ ಬಗ್ಗೆ ಮುಂದಿನ ದಿನಗಳಲ್ಲಿ ತೀವ್ರತರವಾದ ಹೋರಾಟ ಅನಿವಾರ್ಯ ಎಂದು ಡಿ.ವೈ.ಎಫ್.ಐ. ಎಚ್ಚರಿಸಿದೆ.

Printed and published by P. RAMACHANDRA RAO on behalf of Communist Party of India (Marxist), Karnataka State Committee, L-56, K.V. Temple Street, Sulthanpet, Bangalore- 560053. Phone No. 75331 Editor: P. RAMACHANDRA RAO managerial Office: C/O Kriya Prakashana, Shobha Lodge Complex, 5th Main Road, Gandhinagar, Bangalore-560009.